$\Delta PQM$ ದ ವಿಸ್ತೀರ್ಣ = $\frac{1}{2} \times 8 \times 6 = 24\ sq.$

$\Delta PQS$ ದ ವಿಸ್ತೀರ್ಣ = $\Delta PQM$ ದ ವಿಸ್ತೀರ್ಣ

$\Delta PQS$ ದ ಸುತ್ತಳತೆ = PQ + QS + SP = 8+6+10=24 cm

$\Delta PQM$ ದ ಸುತ್ತಳತೆ = PQ +QM +PM = 8+7.2+7.2 = 22.4 cm

ಎರಡೂ ತ್ರಿಭುಜಗಳ ಸುತ್ತಳತೆಗಳು ಬೇರೆ ಬೇರೆಯಾಗಿವೆ.

8. ಐದು ಜೊತೆ ಸರ್ವಸಮವಿರುವ ಭಾಗಗಳನ್ನು ಹೊಂದಿದರೂ ಸಹ ಸರ್ವಸಮವಲ್ಲದ ಎರಡು ತ್ರಿಭುಜಗಳ ಕರಡು ಚಿತ್ರ ರಚಿಸಿ.




PQR ಮತ್ತು XYZ ತ್ರಿಭುಜಗಳನ್ನು ಗಣನೆಗೆ ತೆಗೆದುಕೊಂಡಾಗ

$\Delta PQR$ ಮತ್ತು $\Delta XYZ$

PQ = XZ = 7 cm

PR = YZ = 6 cm

RQ = XY = 5 cm

∠PRQ = ∠XYZ

∠PQR = ∠XZY

ಮೇಲಿನ ಎರಡು ತ್ರಿಭುಜಗಳಲ್ಲಿ 5 ಜೊತೆ ಸರ್ವಸಮತೆ ಇದ್ದರೂ ಆ ತ್ರಿಭುಜಗಳು ಸರ್ವಸಮವಲ್ಲ.

9. $\Delta ABC$ ಮತ್ತು $\Delta PRQ$ ಸರ್ವಸಮವಾಗಬೇಕಾದರೆ ಒಂದು ಜೊತೆ ಅನುರೂಪ ಭಾಗಗಳನ್ನು ಹೆಸರಿಸಿ. ಯಾವ ನಿಬಂಧನೆಯನ್ನು ನೀವು ಬಳಸುವಿರಿ.




ಹೆಚ್ಚುವರಿ ಅನುರೂಪ ಭಾಗ BC = RQ

ಕೋ.ಬಾ.ಕೋ ಸರ್ವಸಮತೆಯ ನಿಬಂಧನೆ

10. $\Delta ABC \cong \Delta FED$ ಏಕೆ? ವಿವರಿಸಿ




∠ABC = ∠DEF = 90°
BC = DE
∠SPQ = ∠QRS (ತ್ರಿಭುಜದ ಮೂರು ಒಳ ಕೋನಗಳ ಮೊತ್ತ 180°)
ΔABC ≅ ΔFED (ಕೋ.ಬಾ.ಕೋ ಸರ್ವಸಮತೆಯ ನಿಬಂಧನೆ)

ಶ್ರೀ. ಗಣಪತಿ ಕೋಲಾರ (ಜಿ.ಪಿ.ಟಿ)

# ಅಧ್ಯಾಯ – 8
# ಪರಿಮಾಣಗಳ ಹೋಲಿಕೆ

## ಅಭ್ಯಾಸ 8.1

**1. ಅನುಪಾತ ಕಂಡುಹಿಡಿಯಿರಿ.**

ಎ) ರೂ.5 ಕ್ಕೂ 50 ಪೈಸೆಗೂ

- 1 ರೂ = 100 ಪೈಸೆಗಳು
  5ರೂ = 500 ಪೈಸೆಗಳು
  500 ಪೈಸೆಗಳು : 50 ಪೈಸೆಗಳು
  $\frac{500}{50} : \frac{50}{50} = 10 : 1$

ಬಿ) 15 ಕೆ.ಜಿ ಕ್ಕೂ 210 ಗ್ರಾಂ ಕ್ಕೂ

- 1 ಕೆ.ಜಿ = 1000 ಗ್ರಾಂ
  15 ಕೆ.ಜಿ = 15000 ಗ್ರಾಂ
  15000 ಗ್ರಾಂ : 210 ಗ್ರಾಂ
  $\frac{15000}{30} : \frac{210}{30} = 500 : 7$

ಸಿ) 9 ಮೀ ಗೂ 27 ಸೆಂ.ಮೀ ಗೂ

- 1 ಮೀ = 100 ಸೆಂ.ಮೀ
  9 ಮೀ = 900 ಸೆಂ.ಮೀ
  900 ಸೆಂ.ಮೀ : 27 ಸೆಂ.ಮೀ
  $\frac{900}{9} : \frac{27}{9} = 100 : 3$

ಡಿ) 30 ದಿನಗಳಿಗೂ 36 ಗಂಟೆಗಳಗೂ

- 1 ದಿನ = 24 ಗಂಟೆಗಳು
  30 ದಿನ = 720 ಗಂಟೆಗಳು
  720 ಗಂಟೆಗಳು : 36 ಗಂಟೆಗಳು
  $\frac{720}{36} : \frac{36}{36} = 20 : 1$

**2. ಒಂದು ಕಂಪ್ಯೂಟರ್ ಪ್ರಯೋಗಾಲಯದಲ್ಲಿ ಪ್ರತಿ 6 ವಿದ್ಯಾರ್ಥಿಗಳಿಗೆ 3 ಕಂಪ್ಯೂಟರ್‌ಗಳಿವೆ. 24 ವಿದ್ಯಾರ್ಥಿಗಳಿಗೆ ಬೇಕಾಗುವ ಕಂಪ್ಯೂಟರ್‌ಗಳೆಷ್ಟು?**

- 6 ವಿದ್ಯಾರ್ಥಿಗಳಿಗೆ ಬೇಕಾಗುವ ಕಂಪ್ಯೂಟರ್‌ಗಳು = 3
  24 ವಿದ್ಯಾರ್ಥಿಗಳಿಗೆ ಬೇಕಾಗುವ ಕಂಪ್ಯೂಟರ್‌ಗಳು = x ಆಗಿರಲಿ

$3 : x = 6 : 24$

$\frac{3}{x} = \frac{6}{24}$

$6 \times x = 3 \times 24$

$x = \frac{3 \times 24}{6}$

$x = 12$

∴ 24 ವಿದ್ಯಾರ್ಥಿಗಳಿಗೆ ಬೇಕಾಗುವ ಕಂಪ್ಯೂಟರ್‌ಗಳು = 12

**3. ರಾಜಸ್ಥಾನದ ಜನಸಂಖ್ಯೆ = 570 ಲಕ್ಷ ಹಾಗೂ ಉತ್ತರ ಪ್ರದೇಶದ ಜನಸಂಖ್ಯೆ = 1660 ಲಕ್ಷಗಳು. ರಾಜಸ್ಥಾನದ ವಿಸ್ತೀರ್ಣ = 3 ಲಕ್ಷ ಕಿ.ಮೀ$^2$ ಮತ್ತು ಉತ್ತರ ಪ್ರದೇಶದ ವಿಸ್ತೀರ್ಣ = 2ಲಕ್ಷ ಕಿ.ಮೀ$^2$**

**ಎ) ಈ ರಾಜ್ಯಗಳಲ್ಲಿ ಪ್ರತೀ ಚದರ ಕಿಲೋಮೀಟರ್‌ಗೆ ಇರುವ ಜನಸಂಖ್ಯೆ ಎಷ್ಟು?**

- ರಾಜಸ್ಥಾನದ ಪ್ರತಿ ಚದರ ಕಿ.ಮೀ ಗೆ ಇರುವ ಜನಸಂಖ್ಯೆ $= \frac{\text{ರಾಜಸ್ಥಾನದ ಜನಸಂಖ್ಯೆ}}{\text{ರಾಜಸ್ಥಾನದ ವಿಸ್ತೀರ್ಣ}}$
  $= \frac{570}{3} = 190$
- ಉತ್ತರ ಪ್ರದೇಶದ ಪ್ರತಿ ಚದರ ಕಿ.ಮೀ ಗೆ ಇರುವ ಜನಸಂಖ್ಯೆ $= \frac{\text{ಉತ್ತರ ಪ್ರದೇಶದ ಜನಸಂಖ್ಯೆ}}{\text{ಉತ್ತರ ಪ್ರದೇಶದ ವಿಸ್ತೀರ್ಣ}}$
  $= \frac{1660}{2} = 830$

**ಬಿ) ಕಡಿಮೆ ಜನಸಂಖ್ಯೆ ಇರುವ ರಾಜ್ಯ ಯಾವುದು?**

- ರಾಜಸ್ಥಾನದಲ್ಲಿ ಕಡಿಮೆ ಜನಸಂಖ್ಯೆ ಇದೆ.

ಶ್ರೀ ಗಣಪತಿ ಕೋಲಾರ (ಜಿ.ಪಿ.ಟಿ)

## ಅಭ್ಯಾಸ 8.2

**1. ಮುಂದೆ ನೀಡಿರುವ ಭಿನ್ನರಾಶಿಗಳನ್ನು ಶೇಕಡಾಗೆ ಪರಿವರ್ತಿಸಿ.**

ಎ) $\frac{1}{8} = \frac{1}{8} \times 100 = 12.5\%$

ಬಿ) $\frac{5}{4} = \frac{5}{4} \times 100 = 125\%$

ಸಿ) $\frac{3}{40} = \frac{3}{40} \times 100 = 7.5\%$

ಡಿ) $\frac{2}{7} = \frac{2}{7} \times 100 = 28.57\%$

**2. ಮುಂದೆ ನೀಡಿರುವ ದಶಮಾಂಶಗಳನ್ನು ಶೇಕಡಾಕ್ಕೆ ಪರಿವರ್ತಿಸಿ.**

ಎ) $0.65 = \frac{65}{100} = \frac{65}{100} \times 100 = 65\%$

ಬಿ) $2.1 = \frac{21}{10} = \frac{21}{10} \times 100 = 210\%$

ಸಿ) $0.02 = \frac{2}{100} = \frac{2}{100} \times 100 = 2\%$

ಡಿ) $12.35 = \frac{1235}{100} = \frac{1235}{100} \times 100 = 1235\%$

**3. ಮುಂದಿನ ಚಿತ್ರಗಳಲ್ಲಿ ಬಣ್ಣ ತುಂಬಿರುವ ಭಾಗವನ್ನು ಅಂದಾಜಿಸಿ ಹಾಗೂ ಬಣ್ಣ ತುಂಬಿರುವ ಶೇಕಡಾ ಭಾಗ ಕಂಡುಹಿಡಿಯಿರಿ.**



(i) (ii) (iii)

ಎ) $\frac{1}{4}$ ಭಾಗಕ್ಕೆ ಬಣ್ಣ ಹಾಕಲಾಗಿದೆ.

$\frac{1}{4} \times 100 = 25\%$

ಬಿ) $\frac{3}{5}$ ಭಾಗಕ್ಕೆ ಬಣ್ಣ ಹಾಕಲಾಗಿದೆ.

$\frac{3}{5} \times 100 = 60\%$

ಸಿ) $\frac{3}{8}$ ಭಾಗಕ್ಕೆ ಬಣ್ಣ ಹಾಕಲಾಗಿದೆ.

$\frac{3}{8} \times 100 = 37.5\%$

**4. ಬೆಲೆ ಕಂಡುಹಿಡಿಯಿರಿ.**

ಎ) 250 ರ 15%

$= 250 \times \frac{15}{100} = \frac{75}{2} = 37.5$

ಬಿ) 1 ಗಂಟೆಯ 1%

1 ಗಂಟೆ = 60 ನಿಮಿಷಗಳು

$= 60 \times \frac{1}{100} = \frac{3}{5}$ ನಿಮಿಷಗಳು

ಸಿ) ರೂ. 2500 ರ 20%

$= 2500 \times \frac{20}{100} = 500$ ರೂ.

ಡಿ) 1 ಕೆ.ಜಿ ಯ 75%

1 ಕೆ.ಜಿ = 1000 ಗ್ರಾಂ. ಗಳು

$= 1000 \times \frac{75}{100} = 750$ ಗ್ರಾಂ. ಗಳು

**5. ಮುಂದಿನ ಸಂದರ್ಭದಲ್ಲಿ ಪೂರ್ಣಾಂಶವನ್ನು ಕಂಡುಹಿಡಿಯಿರಿ.**

ಎ) ಪೂರ್ಣಾಂಶದ 5%, 600 ಆಗಿದೆ.

ಆ ಪೂರ್ಣಾಂಶವು '$x$' ಆಗಿರಲಿ

$\therefore x$ ರ 5% = 600

$x \times \frac{5}{100} = 600$

$x = 600 \times \frac{100}{5}$

$x = 12,000$

ಬಿ) ಪೂರ್ಣಾಂಶದ 12%, ರೂ. 1080 ಆಗಿದೆ.

ಆ ಪೂರ್ಣಾಂಶವು '$x$' ಆಗಿರಲಿ

$\therefore x$ ರ 12% = 1080

$x \times \frac{12}{100} = 1080$

$x = 1080 \times \frac{100}{12}$

$x =$ ರೂ. 9,000

ಸಿ) ಪೂರ್ಣಾಂಶದ 40%, 500 ಕಿ.ಮೀ ಆಗಿದೆ.

ಆ ಪೂರ್ಣಾಂಶವು '$x$' ಆಗಿರಲಿ

$\therefore x$ ರ 40% = 500

$x \times \frac{40}{100} = 500$

$x = 500 \times \frac{100}{40}$

$x = 1250$ ಕಿ. ಮೀ

ಡಿ) ಪೂರ್ಣಾಂಶದ 70% , 14 ನಿಮಿಷ ಅಗಿದೆ.

ಆ ಪೂರ್ಣಾಂಶವು ' $x$ ' ಆಗಿರಲಿ

∴ $x$ ರ 70% = 14

$x \times \frac{70}{100} = 14$

$x = 14 \times \frac{100}{70}$

$x = 20$ ನಿಮಿಷಗಳು

ಇ) ಪೂರ್ಣಾಂಶದ 8% , 40 ಲೀಟರ್ ಅಗಿದೆ.

ಆ ಪೂರ್ಣಾಂಶವು ' $x$ ' ಆಗಿರಲಿ

∴ $x$ ರ 8% = 40

$x \times \frac{8}{100} = 40$

$x = 40 \times \frac{100}{8}$

$x = 500$ ಲೀಟರ್‌ಗಳು

6. ಮುಂದೆ ನೀಡಿರುವ ಶೇಕಡಾ ಬೆಲೆಗಳನ್ನು ಭಿನ್ನರಾಶಿಯ ರೂಪಕ್ಕೆ ಬರೆದು, ಭಿನ್ನರಾಶಿಯನ್ನು ಸರಳರೂಪಕ್ಕೆ ತನ್ನಿ.

ಎ) 25%

$= \frac{25}{100} = \frac{1}{4}$

ಸಿ) 20%

$= \frac{20}{100} = \frac{1}{5}$

ಬಿ) 150%

$= \frac{150}{100} = \frac{3}{2}$

ಡಿ) 5%

$= \frac{5}{100} = \frac{1}{20}$

7. ಒಂದು ನಗರದಲ್ಲಿ 30% ಮಹಿಳೆಯರು, 40% ಪುರುಷರು ಮತ್ತು ಉಳಿದವರು ಮಕ್ಕಳು ಇದ್ದಾರೆ ಆ ನಗರದಲ್ಲಿ ಶೇಕಡಾ ಎಷ್ಟು ಮಕ್ಕಳಿದ್ದಾರೆ?

- ಮಹಿಳೆಯರು = 30%

ಪುರುಷರು = 40%

ಮಕ್ಕಳು = 100 – (30 + 40)

= 100 – 70

= 30%

∴ ಮಕ್ಕಳು 30% ರಷ್ಟು ಇದ್ದಾರೆ.

8.15,000 ಮತದಾರರಿರುವ ಒಂದು ಕ್ಷೇತ್ರದಲ್ಲಿ 60% ಜನ ಮತ ಚಲಾಯಿಸಿದ್ದಾರೆ. ಶೇಕಡಾ ಎಷ್ಟು ಜನರು ಮತ ಚಲಾಯಿಸಲಿಲ್ಲ? ಮತ ಚಲಾಯಿಸಿದವರ ಸಂಖ್ಯೆ ಎಷ್ಟು ಎಂಬುದನ್ನು ನೀವು ಕಂಡುಹಿಡಿಯಬಲ್ಲಿರಾ?

- ಮತದಾರರ ಒಟ್ಟು ಸಂಖ್ಯೆ = 15,000

ಮತ ಚಲಾಯಿಸಿದವರು =60%

ಮತ ಚಲಾಯಿಸದವರ ಶೇಕಡಾ ಭಾಗ

= 100 – 60 = 40%

ಮತ ಚಲಾಯಿಸದವರ ಸಂಖ್ಯೆ =

$= \frac{40}{100} \times 1500 = 6000$

9. ಮೀರಾ ತನ್ನ ವೇತನದಲ್ಲಿ ರೂ. 400ನ್ನು ಉಳಿತಾಯ ಮಾಡುತ್ತಾಳೆ. ಈ ಮೊತ್ತ ಅವಳ ವೇತನದ 10% ಆದರೆ, ಆಕೆಯ ವೇತನವೆಷ್ಟು?

- ಮೀರಾಳ ವೇತನ ' $x$ ' ಆಗಿರಲಿ

∴ $x$ ರ 10% = 400

$x \times \frac{10}{100} = 400$

$x = 400 \times \frac{100}{10}$

$x = 4000$ ರೂ. ಳು

∴ ಮೀರಾಳ ವೇತನ ರೂ. 4000 ಆಗಿದೆ.

10. ಒಂದು ಋತುಮಾನದಲ್ಲಿ ಸ್ಥಳೀಯ ಕ್ರಿಕೆಟ್ ತಂಡ ತಾನು ಆಡಿದ 20 ಪಂದ್ಯಗಳಲ್ಲಿ 25% ಪಂದ್ಯಗಳನ್ನು ಗೆಲ್ಲುತ್ತದೆ. ಆ ತಂಡ ಗೆದ್ದ ಪಂದ್ಯಗಳೆಷ್ಟು?

- ತಂಡ ಆಡಿದ ಒಟ್ಟು ಪಂದ್ಯಗಳ ಸಂಖ್ಯೆ = 20

ಗೆದ್ದ ಪಂದ್ಯಗಳ ಶೇಕಡಾ ಭಾಗ = 25%

ಗೆದ್ದ ಪಂದ್ಯಗಳ ಸಂಖ್ಯೆ ' $x$ ' ಆಗಿರಲಿ

20 ರ 25% = $x$

$20 \times \frac{25}{100} = x$

$x = 5$

∴ ಗೆದ್ದ ಪಂದ್ಯಗಳ ಸಂಖ್ಯೆ = 5

## ಅಭ್ಯಾಸ 8.3

1. ಮುಂದಿನ ವ್ಯವಹಾರಗಳಲ್ಲಿ ಉಂಟಾಗಿರುವ ಲಾಭ ಅಥವಾ ನಷ್ಟವೆಷ್ಟು ತಿಳಿಸಿ. ಹಾಗೂ ಪ್ರತಿ ಸಂದರ್ಭದಲ್ಲಿ ಶೇಕಡಾ ಲಾಭ ಅಥವಾ ಶೇಕಡಾ ನಷ್ಟ ಕಂಡುಹಿಡಿಯಿರಿ.

ಎ) ಒಂದು ಕೈ ತೋಟದ ಕತ್ತರಿಯನ್ನು ರೂ. 250 ಕ್ಕೆ ಕೊಂಡು ರೂ. 325 ಕ್ಕೆ ಮಾರಲಾಯಿತು.

➢ ಕೊಂಡ ಬೆಲೆ = ರೂ. 250

ಮಾರಿದ ಬೆಲೆ = ರೂ. 325

ಲಾಭ = ಮಾರಿದ ಬೆಲೆ – ಕೊಂಡ ಬೆಲೆ

= 325 – 250

= 75 ರೂ.

ಶೇಕಡಾ ಲಾಭ = $\frac{\text{ಲಾಭ}}{\text{ಕೊಂಡ ಬೆಲೆ}} \times 100$

ಶೇಕಡಾ ಲಾಭ = $\frac{75}{250} \times 100$

= 30%

ಬಿ) ಒಂದು ರೇಫ್ರಿಜರೇಟರ್‌ನ್ನು ರೂ.12,000 ಕ್ಕೆ ಕೊಂಡು ರೂ.13,500 ಕ್ಕೆ ಮಾರಲಾಯಿತು.

➢ ಕೊಂಡ ಬೆಲೆ = ರೂ. 12,000

ಮಾರಿದ ಬೆಲೆ = ರೂ. 13,500

ಲಾಭ = ಮಾರಿದ ಬೆಲೆ – ಕೊಂಡ ಬೆಲೆ

= 13,500 – 12,000

= 1,500 ರೂ.

ಶೇಕಡಾ ಲಾಭ = $\frac{\text{ಲಾಭ}}{\text{ಕೊಂಡ ಬೆಲೆ}} \times 100$

ಶೇಕಡಾ ಲಾಭ = $\frac{1500}{12000} \times 100$

= 12.5%

ಸಿ) ಒಂದು ಕಪಾಟನ್ನು ರೂ.2,500 ಕ್ಕೆ ಕೊಂಡು ರೂ. 3,000 ಕ್ಕೆ ಮಾರಲಾಯಿತು.

➢ ಕೊಂಡ ಬೆಲೆ = ರೂ. 2,500

ಮಾರಿದ ಬೆಲೆ = ರೂ. 3,000

ಲಾಭ = ಮಾರಿದ ಬೆಲೆ – ಕೊಂಡ ಬೆಲೆ

= 3,000 – 2,500

= 500 ರೂ.

ಶೇಕಡಾ ಲಾಭ = $\frac{\text{ಲಾಭ}}{\text{ಕೊಂಡ ಬೆಲೆ}} \times 100$

ಶೇಕಡಾ ಲಾಭ = $\frac{500}{2500} \times 100$

= 20%

ಡಿ) ಒಂದು ಸ್ಕರ್ಟ್‌ನ್ನು ರೂ. 250 ಕ್ಕೆ ಕೊಂಡು ರೂ. 150 ಕ್ಕೆ ಮಾರಲಾಗಿದೆ.

➢ ಕೊಂಡ ಬೆಲೆ = ರೂ. 250

ಮಾರಿದ ಬೆಲೆ = ರೂ. 150

ನಷ್ಟ = ಕೊಂಡ ಬೆಲೆ – ಮಾರಿದ ಬೆಲೆ

= 250 – 150

= 100 ರೂ.

ಶೇಕಡಾ ನಷ್ಟ = $\frac{\text{ನಷ್ಟ}}{\text{ಕೊಂಡ ಬೆಲೆ}} \times 100$

ಶೇಕಡಾ ನಷ್ಟ = $\frac{100}{250} \times 100$

= 40%

2. ಮುಂದಿನ ಅನುಪಾತದ ಪ್ರತಿಯೊಂದು ಭಾಗವನ್ನು ಶೇಕಡಾಗೆ ಪರಿವರ್ತಿಸಿ.

ಎ) 3 : 1

➢ ಒಟ್ಟು ಭಾಗಗಳು = 3 + 1 = 4

ಮೊದಲ ಭಾಗದ ಶೇಕಡಾ = $\frac{3}{4} \times 100 = 75\%$

ಎರಡನೇ ಭಾಗದ ಶೇಕಡಾ = $\frac{1}{4} \times 100 = 25\%$

ಬಿ) 2 : 3 : 5

➢ ಒಟ್ಟು ಭಾಗಗಳು = 2 + 3 + 5 = 10

ಮೊದಲ ಭಾಗದ ಶೇಕಡಾ = $\frac{2}{10} \times 100 = 20\%$

ಎರಡನೇ ಭಾಗದ ಶೇಕಡಾ = $\frac{3}{10} \times 100 = 30\%$

ಮೂರನೇ ಭಾಗದ ಶೇಕಡಾ = $\frac{5}{10} \times 100 = 50\%$

ಸಿ) 1 : 4

➢ ಒಟ್ಟು ಭಾಗಗಳು = 1 + 4 = 5

ಮೊದಲ ಭಾಗದ ಶೇಕಡಾ = $\frac{1}{5} \times 100 = 20\%$

ಎರಡನೇ ಭಾಗದ ಶೇಕಡಾ = $\frac{4}{5} \times 100 = 80\%$

ಡಿ) 1 : 2 : 5

➢ ಒಟ್ಟು ಭಾಗಗಳು = 1 + 2 + 5 = 18

ಮೊದಲ ಭಾಗದ ಶೇಕಡಾ = $\frac{1}{8} \times 100 = 12.5\%$

ಎರಡನೇ ಭಾಗದ ಶೇಕಡಾ = $\frac{2}{8} \times 100 = 25\%$

ಮೂರನೇ ಭಾಗದ ಶೇಕಡಾ = $\frac{5}{8} \times 100 = 62.5\%$

ಶ್ರೀ. ಗಣಪತಿ ಕೋಲಾರ (ಜಿ.ಪಿ.ಟಿ)

3. ಒಂದು ಪಟ್ಟಣದ ಜನಸಂಖ್ಯೆ 25,000 ದಿಂದ 24,500 ಕ್ಕೆ ಇಳಿಕೆಯಾಗಿದೆ. ಶೇಕಡಾ ಇಳಿಕೆ ಕಂಡುಹಿಡಿಯಿರಿ.

➢ ಇಳಿಕೆಯಾದ ಜನಸಂಖ್ಯೆ = 25,000 – 24,500

= 500

ಶೇಕಡಾ ಇಳಿಕೆ = $\frac{\text{ಇಳಿಕೆ}}{\text{ಮೂಲ ಜನಸಂಖ್ಯೆ}} \times 100$

ಶೇಕಡಾ ಇಳಿಕೆ = $\frac{500}{25000} \times 100$

=2 %

4. ಅರುಣನು ರೂ. 3,50,000 ಕ್ಕೆ ಒಂದು ಕಾರನ್ನು ಕೊಂಡನು. ಮುಂದಿನ ವರ್ಷ ಕಾರಿನ ಬೆಲೆ ರೂ. 3,70,000 ಕ್ಕೆ ಏರಿದರೆ. ಶೇಕಡಾ ಏರಿಕೆ ಎಷ್ಟು?

➢ ಕಾರಿನ ಮೂಲ ಬೆಲೆ = ರೂ. 3,50,000

ಏರಿಕೆಯಾದ ಕಾರಿನ ಬೆಲೆ = ರೂ. 3,70,000

ಏರಿಕೆ = 3,70,000 – 3,50,000

= 20,000 ರೂ.

ಶೇಕಡಾ ಏರಿಕೆ = $\frac{\text{ಏರಿಕೆ}}{\text{ಮೂಲ ಬೆಲೆ}} \times 100$

ಶೇಕಡಾ ಏರಿಕೆ = $\frac{20000}{350000} \times 100$

$= \frac{40}{7}\% = 5.7\%$

5. ನಾನು ಒಂದು ಟಿವಿಯನ್ನು ರೂ. 10,000 ಕ್ಕೆ ಕೊಂಡು 20 %ಲಾಭಕ್ಕೆ ಮಾರಿದರೆ ನನಗೆ ದೊರೆಯುವ ಹಣವೆಷ್ಟು?

➢ ಟಿವಿಯ ಅಸಲು ಬೆಲೆ = ರೂ. 10,000

ಶೇಕಡಾ ಲಾಭ = 20%

10,000 ರೂ. ನ 20% =

$10{,}000 \times \frac{20}{100}$ = 2,000 ರೂ. ಗಳು

ನನಗೆ ದೊರೆತ ಹಣ = 10,000 + 2,000

= ರೂ. 12,000

6. ಜೂಹಿಯೂ ಒಂದು ವಾಷಿಂಗ್ ಮೆಷಿನ್‌ನ್ನು ರೂ. 13,500 ಕ್ಕೆ ಮಾರಿದಳು. ವ್ಯವಹಾರದ ಚೌಕಾಶಿಯಲ್ಲಿ ಅವಳು 20% ನಷ್ಟ ಅನುಭವಿಸಿದಳು. ಹಾಗಾದರೆ ಅವಳು ಅದನ್ನು ಎಷ್ಟು ಬೆಲೆಗೆ ಕೊಂಡಿದ್ದಳು?

➢ 20% ನಷ್ಟವೆಂದರೆ ಕೊಂಡ ಬೆಲೆ ರೂ. 100 ಇದ್ದಾಗ ನಷ್ಟ = ರೂ. 20

ಆದ್ದರಿಂದ ಮಾರಿದ ಬೆಲೆ = ರೂ.(100-20) = 80

ಮಾರಿದ ಬೆಲೆ ರೂ. 80 ಇದ್ದಾಗ ಕೊಂಡ ಬೆಲೆ ರೂ. 100

ಆದ್ದರಿಂದ ಮಾರಿದ ಬೆಲೆ ರೂ. 13,500 ಇದ್ದಾಗ

ಕೊಂಡ ಬೆಲೆ = $\frac{100}{80} \times 13{,}500$

$= 25 \times 675$

= ರೂ. 16,875

7.ಎ. ಸೀಮೆ ಸುಣ್ಣದಲ್ಲಿ ಕ್ಯಾಲ್ಷಿಯಂ, ಇಂಗಾಲ ಹಾಗೂ ಆಮ್ಲಜನಕಗಳು 10:3:12 ಅನುಪಾತದಲ್ಲಿವೆ. ಇಂಗಾಲದ ಶೇಕಡಾ ಪ್ರಮಾಣವೆಷ್ಟು?

➢ ಅನುಪಾತಗಳ ಒಟ್ಟು = 10 + 3 + 12 = 25

ಇಂಗಾಲದ ಶೇಕಡಾ ಭಾಗ = $\frac{3}{25} \times 100 = 12\%$

ಬಿ) ಸೀಮೆ ಸುಣ್ಣದ ಕಡ್ಡಿಯು 3 ಗ್ರಾಂ ಇಂಗಾಲವನ್ನು ಹೊಂದಿದ್ದರೆ, ಸುಣ್ಣದ ಕಡ್ಡಿಯ ತೂಕವೆಷ್ಟು?

➢ ಸೀಮೆ ಸುಣ್ಣದ ಕಡ್ಡಿಯ ತೂಕ ' $x$ ' ಆಗಿರಲಿ

' $x$ ' ನ 12% = 3 ಅಂದರೆ

$x \times \frac{12}{100} = 3$

$x = 3 \times \frac{100}{12}$

$x$ = 25 ಗ್ರಾಂ ಗಳು

8. ಅಮೀನಾಳು ರೂ. 275 ಕ್ಕೆ ಒಂದು ಪುಸ್ತಕವನ್ನು ಕೊಂಡು 15% ನಷ್ಟಕ್ಕೆ ಮಾರುತ್ತಾಳೆ. ಪುಸ್ತಕದ ಮಾರಿದ ಬೆಲೆ ಎಷ್ಟು?

➢ ಪುಸ್ತಕದ ಕೊಂಢ ಬೆಲೆ = ರೂ. 275

ಶೇಕಡಾ ನಷ್ಟ = 15%

ಶೇಕಡಾ ನಷ್ಟ = $\frac{\text{ನಷ್ಟ}}{\text{ಕೊಂಡ ಬೆಲೆ}} \times 100$

ನಷ್ಟ = ಶೇಕಡಾ ನಷ್ಟ × ಕೊಂಡಬೆಲೆ

ನಷ್ಟ = $\frac{15}{100} \times 275$

= ರೂ. 41.25

ಮಾರಿದ ಬೆಲೆ = ಕೊಂಡ ಬೆಲೆ – ನಷ್ಟ

= 275 – 41.25

= ರೂ. 233.75

9. ಮುಂದಿನ ಪ್ರಕಣಗಳಲ್ಲಿ ಮೂರು ವರ್ಷಗಳ ಅಂತ್ಯದಲ್ಲಿ ಪಾವತಿಸಬೇಕಾದ ಮೊತ್ತವೆಷ್ಟು?

ಎ) 12% ವಾರ್ಷಿಕ ಬಡ್ಡಿಯ ದರದಲ್ಲಿ ಅಸಲು = ರೂ. 1,200

ಶ್ರೀ. ಗಣಪತಿ ಕೋಲಾರ

- ಅಸಲು $(P)$ = ರೂ.1,200 ಬಡ್ಡಿದರ $(R)$ = 12%

  ಕಾಲ $(T)$ = 3 ವರ್ಷ

  $I = \frac{P \times T \times R}{100}$

  $I = \frac{1,200 \times 3 \times 12}{100}$

  $I = Rs. 432$

  $A = P + I$

  $A = 1,200 + 432$

  $A = Rs. 1,632$

ಬಿ) 5% ವಾರ್ಷಿಕ ಬಡ್ಡಿ ದರದಲ್ಲಿ ಅಸಲು = ರೂ. 7,500

- ಅಸಲು $(P)$ = ರೂ.7,500 ಬಡ್ಡಿದರ $(R)$ = 5%

  ಕಾಲ $(T)$ = 3 ವರ್ಷ

  $I = \frac{P \times T \times R}{100}$

  $I = \frac{7,500 \times 3 \times 5}{100}$

  $I = Rs. 1,125$

  $A = P + I$

  $A = 7,500 + 1,125$

  $A = Rs. 8,625$

10. ರೂ. 56,000 ಕ್ಕೆ ಎರಡು ವರ್ಷಗಳಿಗೆ ರೂ.280 ಬಡ್ಡಿ ದೊರೆತರೆ, ಬಡ್ಡಿಯ ದರವೆಷ್ಟು?

- ಅಸಲು $(P)$ = ರೂ.56,000

  ಬಡ್ಡಿದರ $(R)$ = ?

  ಕಾಲ $(T)$ = 2 ವರ್ಷ

  ಸರಳ ಬಡ್ಡಿ $(I)$ =ರೂ.280

  $I = \frac{P \times T \times R}{100}$

  $280 = \frac{56,000 \times 2 \times R}{100}$

  $R = \frac{280 \times 100}{56,000 \times 2}$

  $R = \frac{1}{4}$

  $R = 0.25\%$

11. ಮೀನಾಳು ಸಾಲಿಯಾನ 9% ಬಡ್ಡಿಯ ದರದಲ್ಲಿ ರೂ. 45 ಬಡ್ಡಿ ಪಾವತಿಸಿದರೆ, ಅವಳು ತೆಗೆದುಕೊಂಡಿದ್ದ ಮೊತ್ತವೆಷ್ಟು?

- ಅಸಲು $(P)$ = ?

  ಬಡ್ಡಿದರ $(R)$ = 9%

  ಕಾಲ $(T)$ = 1 ವರ್ಷ

  ಸರಳ ಬಡ್ಡಿ $(I)$ =ರೂ.45

  $I = \frac{P \times T \times R}{100}$

  $45 = \frac{P \times 1 \times 9}{100}$

  $P = \frac{100 \times 45}{9 \times 1}$

  $P = \text{ರೂ}. 500$

ಶ್ರೀ. ಗಣಪತಿ ಕೋಲಾರ (ಜಿ.ಪಿ.ಟಿ)

# ಅಧ್ಯಾಯ – 9
# ಭಾಗಲಬ್ಧ ಸಂಖ್ಯೆಗಳು

## ಅಭ್ಯಾಸ 9.1

1. ಇವುಗಳ ನಡುವೆ ಐದು ಭಾಗಲಬ್ಧ ಸಂಖ್ಯೆಗಳನ್ನು ಪಟ್ಟಿ ಮಾಡಿ.

ಎ) -1 ಮತ್ತು 0

$$-1=\frac{-1}{1}=\frac{-1}{1}\times\frac{10}{10}=\frac{-10}{10}$$

$$0=\frac{0}{1}=\frac{0}{1}\times\frac{10}{10}=\frac{0}{10}$$

$$\frac{-10}{10}<\frac{-9}{10}<\frac{-8}{10}<\frac{-7}{10}<\frac{-6}{10}<\frac{-5}{10}<\frac{0}{10}$$

$$-1<\frac{-9}{10}<\frac{-8}{10}<\frac{-7}{10}<\frac{-6}{10}<\frac{-5}{10}<0$$

∴ -1 ಮತ್ತು 0 ಯ ನಡುವೆ ಇರುವ ಐದು ಭಾಗಲಬ್ಧ ಸಂಖ್ಯೆಗಳು

$$\frac{-9}{10},\ \frac{-8}{10},\ \frac{-7}{10},\ \frac{-6}{10}\text{ ಮತ್ತು }\frac{-5}{10}$$

ಬಿ) -2 ಮತ್ತು -1

$$-2=\frac{-2}{1}=\frac{-2}{1}\times\frac{10}{10}=\frac{-20}{10}$$

$$-1=\frac{-1}{1}=\frac{-1}{1}\times\frac{10}{10}=\frac{-10}{10}$$

$$\frac{-20}{10}<\frac{-19}{10}<\frac{-18}{10}<\frac{-17}{10}<\frac{-16}{10}<\frac{-15}{10}<\frac{-10}{10}$$

$$-2<\frac{-19}{10}<\frac{-18}{10}<\frac{-17}{10}<\frac{-16}{10}<\frac{-15}{10}<-1$$

∴ -2 ಮತ್ತು -1 ಯ ನಡುವೆ ಇರುವ ಐದು ಭಾಗಲಬ್ಧ ಸಂಖ್ಯೆಗಳು

$$\frac{-19}{10},\frac{-18}{10},\frac{-17}{10},\frac{-16}{10}\text{ ಮತ್ತು }\frac{-15}{10}$$

ಸಿ) $\frac{-4}{5}$ ಮತ್ತು $\frac{-2}{3}$

$$\frac{-4}{5}=\frac{-4}{5}\times\frac{9}{9}=\frac{-36}{45}$$

$$\frac{-2}{3}=\frac{-2}{3}\times\frac{15}{15}=\frac{-30}{45}$$

$$\frac{-36}{45}<\frac{-35}{45}<\frac{-34}{45}<\frac{-33}{45}<\frac{-32}{45}<\frac{-31}{45}<\frac{-30}{45}$$

$$\frac{-4}{9}<\frac{-7}{9}<\frac{-34}{45}<\frac{-33}{45}<\frac{-32}{45}<\frac{-31}{45}<\frac{-2}{3}$$

∴ $\frac{-4}{5}$ ಮತ್ತು $\frac{-2}{3}$ ಯ ನಡುವೆ ಇರುವ ಐದು ಭಾಗಲಬ್ಧ ಸಂಖ್ಯೆಗಳು

$$\frac{-7}{9},\frac{-34}{45},\frac{-33}{45},\frac{-32}{45}\text{ ಮತ್ತು }\frac{-31}{45}$$

ಸಿ) $\frac{-1}{2}$ ಮತ್ತು $\frac{2}{3}$

$$\frac{-1}{2}=\frac{-1}{2}\times\frac{6}{6}=\frac{-6}{12}$$

$$\frac{2}{3}=\frac{2}{3}\times\frac{4}{4}=\frac{8}{12}$$

$$\frac{-6}{12}<\frac{-5}{12}<\frac{-4}{12}<\frac{-3}{12}<\frac{-2}{12}<\frac{-1}{12}<\frac{8}{12}$$

$$\frac{-1}{2}<\frac{-5}{12}<\frac{-1}{3}<\frac{-1}{4}<\frac{-1}{6}<\frac{-1}{12}<\frac{2}{3}$$

∴ $\frac{-4}{5}$ ಮತ್ತು $\frac{-2}{3}$ ಯ ನಡುವೆ ಇರುವ ಐದು ಭಾಗಲಬ್ಧ ಸಂಖ್ಯೆಗಳು

$$\frac{-5}{12},\frac{-1}{3},\frac{-1}{4},\frac{-1}{6}\text{ ಮತ್ತು }\frac{-1}{12}$$

ಶ್ರೀ. ಗಣಪತಿ ಕೋಲಾರ (ಜಿ.ಪಿ.ಟಿ)

**2. ನೀಡಿರುವ ಪ್ರತಿಯೊಂದು ವಿನ್ಯಾಸಕ್ಕೆ ಇನ್ನೂ ನಾಲ್ಕು ಭಾಗಲಬ್ಧ ಸಂಖ್ಯೆಗಳನ್ನು ಬರೆಯಿರಿ**

ಎ) $\frac{-3}{5}, \frac{-6}{10}, \frac{-9}{15}, \frac{-12}{20}, \dots\dots\dots$

$\frac{-3}{5} = \frac{-3}{5} \times \frac{1}{1}$ , $\frac{-6}{10} = \frac{-3}{5} \times \frac{2}{2}$

$\frac{-9}{15} = \frac{-3}{5} \times \frac{3}{3}$ , $\frac{-12}{20} = \frac{-3}{5} \times \frac{4}{4}$

ಕೊಟ್ಟಿರುವ ಸಂಖ್ಯೆಗಳ ವಿನ್ಯಾಸವನ್ನು ಗುರುತಿಸಿದ್ದೇವೆ. ಮುಂದಿನ ಸಂಖ್ಯೆಗಳು ಹೀಗಿವೆ.

$\frac{-3}{5} \times \frac{5}{5} = \frac{-15}{25}$ $\frac{-3}{5} \times \frac{6}{6} = \frac{-18}{30}$

$\frac{-3}{5} \times \frac{7}{7} = \frac{-21}{35}$ $\frac{-3}{5} \times \frac{8}{8} = \frac{-24}{40}$

$\therefore \frac{-15}{25}, \frac{-18}{30}, \frac{-21}{35}, \frac{-24}{40}$

ಬಿ) $\frac{-1}{4}, \frac{-2}{8}, \frac{-3}{12}, \dots\dots\dots$

$\frac{-1}{4} = \frac{-1}{4} \times \frac{1}{1}$ , $\frac{-2}{8} = \frac{-1}{4} \times \frac{2}{2}$

$\frac{-3}{12} = \frac{-1}{4} \times \frac{3}{3}$

ಕೊಟ್ಟಿರುವ ಸಂಖ್ಯೆಗಳ ವಿನ್ಯಾಸವನ್ನು ಗುರುತಿಸಿದ್ದೇವೆ. ಮುಂದಿನ ಸಂಖ್ಯೆಗಳು ಹೀಗಿವೆ.

$\frac{-1}{4} \times \frac{4}{4} = \frac{-4}{16}$ $\frac{-1}{4} \times \frac{5}{5} = \frac{-5}{20}$

$\frac{-1}{4} \times \frac{6}{6} = \frac{-6}{24}$ $\frac{-1}{4} \times \frac{7}{7} = \frac{-7}{28}$

$\therefore \frac{-4}{16}, \frac{-5}{20}, \frac{-6}{24}, \frac{-7}{28}$

ಸಿ) $\frac{-1}{6}, \frac{2}{-12}, \frac{3}{-18}, \frac{4}{-24}, \dots\dots\dots$

$\frac{-1}{6} = \frac{-1}{6} \times \frac{1}{1}$ , $\frac{2}{-12} = \frac{-1}{6} \times \frac{-2}{-2}$

$\frac{3}{-18} = \frac{-1}{6} \times \frac{-3}{-3}$ , $\frac{4}{-24} = \frac{-1}{6} \times \frac{-4}{-4}$

ಕೊಟ್ಟಿರುವ ಸಂಖ್ಯೆಗಳ ವಿನ್ಯಾಸವನ್ನು ಗುರುತಿಸಿದ್ದೇವೆ. ಮುಂದಿನ ಸಂಖ್ಯೆಗಳು ಹೀಗಿವೆ.

$\frac{-1}{6} \times \frac{-5}{-5} = \frac{5}{-30}$ $\frac{-1}{6} \times \frac{-6}{-6} = \frac{6}{-36}$

$\frac{-1}{6} \times \frac{-7}{-7} = \frac{7}{-42}$ $\frac{-1}{6} \times \frac{-8}{-8} = \frac{8}{-48}$

$\therefore \frac{5}{-30}, \frac{6}{-36}, \frac{7}{-42}, \frac{8}{-48}$

ಡಿ) $\frac{-2}{3}, \frac{2}{-3}, \frac{4}{-6}, \frac{6}{-9}, \dots\dots\dots$

$\frac{-2}{3} = \frac{-2}{3} \times \frac{1}{1}$ , $\frac{2}{-3} = \frac{-2}{3} \times \frac{-1}{-1}$

$\frac{4}{-6} = \frac{-2}{3} \times \frac{-2}{-2}$ , $\frac{6}{-9} = \frac{-2}{3} \times \frac{-3}{-3}$

ಕೊಟ್ಟಿರುವ ಸಂಖ್ಯೆಗಳ ವಿನ್ಯಾಸವನ್ನು ಗುರುತಿಸಿದ್ದೇವೆ. ಮುಂದಿನ ಸಂಖ್ಯೆಗಳು ಹೀಗಿವೆ.

$\frac{-2}{3} \times \frac{-4}{-4} = \frac{8}{-12}$ $\frac{-2}{3} \times \frac{-5}{-5} = \frac{10}{-15}$

$\frac{-2}{3} \times \frac{-6}{-6} = \frac{12}{-18}$ $\frac{-2}{3} \times \frac{-7}{-7} = \frac{14}{-21}$

$\therefore \frac{8}{-12}, \frac{10}{-15}, \frac{12}{-18}, \frac{14}{-21}$

**3. ಇವುಗಳಿಗೆ ಸಮಾನವಾದ ನಾಲ್ಕು ಭಾಗಲಬ್ಧ ಸಂಖ್ಯೆಗಳನ್ನು ಬರೆಯಿರಿ.**

ಎ) $\frac{-2}{7}$

$\frac{-2}{7}$ ಕ್ಕೆ ಸಮಾನವಾದ ನಾಲ್ಕು ಭಾಗಲಬ್ಧ ಸಂಖ್ಯೆಗಳು

$\frac{-2}{7} \times \frac{2}{2} = \frac{-4}{14}$ $\frac{-2}{7} \times \frac{3}{3} = \frac{-6}{21}$

$\frac{-2}{7} \times \frac{4}{4} = \frac{-8}{28}$ $\frac{-2}{7} \times \frac{5}{5} = \frac{-10}{35}$

$\frac{-4}{14}, \frac{-6}{21}, \frac{-8}{28}, \frac{-10}{35}$

ಬಿ) $\frac{5}{-3}$

$\frac{5}{-3}$ ಕ್ಕೆ ಸಮಾನವಾದ ನಾಲ್ಕು ಭಾಗಲಬ್ಧ ಸಂಖ್ಯೆಗಳು

$\frac{5}{-3} \times \frac{2}{2} = \frac{10}{-6}$ $\frac{5}{-3} \times \frac{3}{3} = \frac{15}{-9}$

$\frac{5}{-3} \times \frac{4}{4} = \frac{20}{-12}$ $\frac{5}{-3} \times \frac{5}{5} = \frac{25}{-15}$

$\frac{10}{-6}, \frac{15}{-9}, \frac{20}{-12}, \frac{25}{-15}$

ಸಿ) $\frac{4}{9}$

$\frac{4}{9}$ ಕ್ಕೆ ಸಮಾನವಾದ ನಾಲ್ಕು ಭಾಗಲಬ್ಧ ಸಂಖ್ಯೆಗಳು

$\frac{4}{9} \times \frac{2}{2} = \frac{8}{18}$ $\frac{4}{9} \times \frac{3}{3} = \frac{12}{27}$

$\frac{4}{9} \times \frac{4}{4} = \frac{16}{36}$ $\frac{4}{9} \times \frac{5}{5} = \frac{20}{45}$

$\frac{8}{18}, \frac{12}{27}, \frac{12}{27}, \frac{20}{45}$

**4. ಸಂಖ್ಯಾರೇಖೆ ರಚಿಸಿ ಮುಂದಿನ ಭಾಗಲಬ್ಧ ಸಂಖ್ಯೆಗಳನ್ನು ಅದರ ಮೇಲೆ ಗುರುತಿಸಿ.**

ಎ) $\frac{3}{4}$




ಬಿ) $\frac{-5}{8}$




ಸಿ) $\frac{-7}{4}$




ಡಿ) $\frac{7}{8}$




**5. P, Q, R, S, T, U, A ಮತ್ತು B ಬಿಂದುಗಳು ಸಂಖ್ಯಾರೇಖೆಯ ಮೇಲೆ TR=RS=SU ಮತ್ತು AP=PQ=QB ಆಗುವಂತೆ ಇವೆ. P, Q, R ಮತ್ತು S ಗಳು ಸೂಚಿಸುವ ಭಾಗಲಬ್ಧ ಸಂಖ್ಯೆಗಳನ್ನು ಹೆಸರಿಸಿ.**




P ಬಿಂದು ಸೂಚಿಸುವ ಭಾಗಲಬ್ಧ ಸಂಖ್ಯೆ = $2\frac{1}{3} = \frac{7}{3}$

Q ಬಿಂದು ಸೂಚಿಸುವ ಭಾಗಲಬ್ಧ ಸಂಖ್ಯೆ = $2\frac{2}{3} = \frac{8}{3}$

R ಬಿಂದು ಸೂಚಿಸುವ ಭಾಗಲಬ್ಧ ಸಂಖ್ಯೆ = $-1\frac{1}{3} = \frac{-4}{3}$

S ಬಿಂದು ಸೂಚಿಸುವ ಭಾಗಲಬ್ಧ ಸಂಖ್ಯೆ = $-1\frac{2}{3} = \frac{-5}{3}$

**6. ಕೊಟ್ಟಿರುವುಗಳಲ್ಲಿ ಯಾವ ಜೋಡಿಗಳು ಒಂದೇ ಭಾಗಲಬ್ಧ ಸಂಖ್ಯೆಯನ್ನು ಸೂಚಿಸುತ್ತವೆ.**

ಎ) $\frac{-7}{21}$ ಮತ್ತು $\frac{3}{9}$

$\frac{-7}{21} = \frac{-7 \div 7}{21 \div 7} = \frac{-1}{3}$, $\quad \frac{3}{9} = \frac{3 \div 3}{9 \div 3} = \frac{1}{3}$

$\frac{-1}{3} \neq \frac{1}{3}$

$\therefore$ $\frac{-7}{21}$ ಮತ್ತು $\frac{3}{9}$ ಇವು ಒಂದೇ ಭಾಗಲಬ್ಧ ಸಂಖ್ಯೆಗಳನ್ನು ಸೂಚಿಸುವುದಿಲ್ಲ.

ಬಿ) $\frac{-16}{20}$ ಮತ್ತು $\frac{20}{-25}$

$\frac{-16}{20} = \frac{-16 \div (-4)}{20 \div (-4)} = \frac{4}{-5}$, $\quad \frac{20}{-25} = \frac{20 \div 5}{-25 \div 5} = \frac{4}{-5}$

$\frac{4}{-5} = \frac{4}{-5}$

$\therefore$ $\frac{-16}{20}$ ಮತ್ತು $\frac{20}{-25}$ ಇವು ಒಂದೇ ಭಾಗಲಬ್ಧ ಸಂಖ್ಯೆಗಳನ್ನು ಸೂಚಿಸುತ್ತವೆ.

ಸಿ) $\frac{-2}{-3}$ ಮತ್ತು $\frac{2}{3}$

$\frac{-2}{-3} = \frac{-2 \div (-1)}{-3 \div (-1)} = \frac{2}{3}$, $\quad \frac{2}{3} = \frac{2 \div 1}{3 \div 1} = \frac{2}{3}$

$\frac{2}{3} = \frac{2}{3}$

$\therefore$ $\frac{-2}{-3}$ ಮತ್ತು $\frac{2}{3}$ ಇವು ಒಂದೇ ಭಾಗಲಬ್ಧ ಸಂಖ್ಯೆಗಳನ್ನು ಸೂಚಿಸುತ್ತವೆ.

ಡಿ) $\frac{-3}{5}$ ಮತ್ತು $\frac{-12}{20}$

$\frac{-3}{5} = \frac{-3 \div 1}{5 \div 1} = \frac{-3}{5}$, $\quad \frac{-12}{20} = \frac{-12 \div 4}{20 \div 4} = \frac{-3}{5}$

$\frac{-3}{5} = \frac{-3}{5}$

$\therefore$ $\frac{-3}{5}$ ಮತ್ತು $\frac{-12}{20}$ ಇವು ಒಂದೇ ಭಾಗಲಬ್ಧ ಸಂಖ್ಯೆಗಳನ್ನು ಸೂಚಿಸುತ್ತವೆ.

ಇ) $\frac{8}{-5}$ ಮತ್ತು $\frac{-24}{15}$

$\frac{8}{-5} = \frac{8 \div 1}{-5 \div 1} = \frac{8}{-5}$, $\quad \frac{-24}{15} = \frac{-24 \div (-3)}{15 \div (-3)} = \frac{8}{-5}$

$\frac{8}{-5} = \frac{8}{-5}$

ಶ್ರೀ. ಗಣಪತಿ ಕೋಲಾರ (ಜಿ.ಪಿ.ಟಿ)

∴ $\frac{8}{-5}$ ಮತ್ತು $\frac{-24}{15}$ ಇವು ಒಂದೇ ಭಾಗಲಬ್ಧ ಸಂಖ್ಯೆಗಳನ್ನು ಸೂಚಿಸುತ್ತವೆ.

ಎಫ್) $\frac{1}{3}$ ಮತ್ತು $\frac{-1}{9}$

$\frac{1}{3} = \frac{1 \div 1}{3 \div 1} = \frac{1}{3}$, $\quad \frac{-1}{9} = \frac{-1 \div 1}{9 \div 1} = \frac{-1}{9}$

$\frac{1}{3} \neq \frac{-1}{9}$,

∴ $\frac{1}{3}$ ಮತ್ತು $\frac{-1}{9}$ ಇವು ಒಂದೇ ಭಾಗಲಬ್ಧ ಸಂಖ್ಯೆಗಳನ್ನು ಸೂಚಿಸುವುದಿಲ್ಲ.

ಜಿ) $\frac{-5}{-9}$ ಮತ್ತು $\frac{5}{-9}$

$\frac{-5}{-9} = \frac{-5 \div 1}{-9 \div 1} = \frac{-5}{-9}$, $\quad \frac{5}{-9} = \frac{5 \div 1}{-9 \div 1} = \frac{5}{-9}$

$\frac{-5}{-9} \neq \frac{5}{-9}$,

∴ $\frac{-5}{-9}$ ಮತ್ತು $\frac{5}{-9}$ ಇವು ಒಂದೇ ಭಾಗಲಬ್ಧ ಸಂಖ್ಯೆಗಳನ್ನು ಸೂಚಿಸುವುದಿಲ್ಲ.

## 7. ಮುಂದೆ ನೀಡಿರುವ ಭಾಗಲಬ್ಧ ಸಂಖ್ಯೆಗಳನ್ನು ಆದರ್ಶ ರೂಪದಲ್ಲಿ ಬರೆಯಿರಿ.

ಎ) $\frac{-8}{6}$

6 ಮತ್ತು 8 ರ ಮ.ಸಾ.ಅ = 2

∴ $\frac{-8}{6}$ ಆದರ್ಶ ರೂಪ $= \frac{-8 \div 2}{6 \div 2} = \frac{-4}{3}$

ಬಿ) $\frac{25}{45}$

25 ಮತ್ತು 45 ರ ಮ.ಸಾ.ಅ = 5

∴ $\frac{25}{45}$ ಆದರ್ಶ ರೂಪ $= \frac{25 \div 5}{45 \div 5} = \frac{5}{9}$

ಸಿ) $\frac{-44}{72}$

44 ಮತ್ತು 72 ರ ಮ.ಸಾ.ಅ = 4

∴ $\frac{-44}{72}$ ಆದರ್ಶ ರೂಪ $= \frac{-44 \div 4}{72 \div 4} = \frac{-11}{18}$

ಡಿ) $\frac{-8}{10}$

8 ಮತ್ತು 10 ರ ಮ.ಸಾ.ಅ = 2

∴ $\frac{-8}{10}$ ಆದರ್ಶ ರೂಪ $= \frac{-8 \div 2}{10 \div 2} = \frac{-4}{5}$

## 8. ಖಾಲಿ ಜಾಗವನ್ನು ಸೂಕ್ತವಾದ ಸಂಕೇತ >,< ಅಥವಾ = ಬಳಸಿ ಭರ್ತಿ ಮಾಡಿ.

ಎ) $\frac{-5}{7}$ ☐ $\frac{2}{3}$

$\frac{-5}{7}$ ಇದು ಋಣ ಭಾಗಲಬ್ಧ ಸಂಖ್ಯೆ

$\frac{2}{3}$ ಇದು ಧನ ಭಾಗಲಬ್ಧ ಸಂಖ್ಯೆ

∴ $\frac{-5}{7} < \frac{2}{3}$

ಬಿ) $\frac{-4}{5}$ ☐ $\frac{-5}{7}$

ಸಮ ಛೇದಗಳಾಗಿ ಪರಿವರ್ತಿಸಲು

$\frac{-4}{5} \times \frac{7}{7} = \frac{-28}{35}$, $\quad \frac{-5}{7} \times \frac{5}{5} = \frac{-25}{35}$

$\frac{-28}{35}$ ಇದು $\frac{-25}{35}$ ಕ್ಕಿಂತ ಕಡಿಮೆ

∴ $\frac{-4}{5} < \frac{-5}{7}$

ಸಿ) $\frac{-7}{8}$ ☐ $\frac{14}{-16}$

ಸಮ ಛೇದಗಳಾಗಿ ಪರಿವರ್ತಿಸಲು

$\frac{-7}{8} \times \frac{2}{2} = \frac{-14}{16}$, $\quad \frac{14}{-16} \times \frac{1}{1} = \frac{14}{-16}$

$\frac{-14}{16}$ ಇದು $\frac{-14}{16}$ ಗೆ ಸಮವಾಗಿದೆ.

∴ $\frac{-7}{8} = \frac{14}{-16}$

ಡಿ) $\frac{-8}{5}$ ☐ $\frac{-7}{4}$

ಸಮ ಛೇದಗಳಾಗಿ ಪರಿವರ್ತಿಸಲು

$\frac{-8}{5} \times \frac{4}{4} = \frac{-32}{20}$, $\quad \frac{-7}{4} \times \frac{5}{5} = \frac{-35}{20}$

$\frac{-32}{20}$ ಇದು $\frac{-35}{20}$ ಕ್ಕಿಂತ ದೊಡ್ಡದು

∴ $\frac{-8}{5} > \frac{-7}{4}$

ಇ) $\frac{1}{-3}$ ☐ $\frac{-1}{4}$

ಸಮ ಛೇದಗಳಾಗಿ ಪರಿವರ್ತಿಸಲು

$\frac{1}{-3} \times \frac{4}{4} = \frac{4}{-12}$, $\quad \frac{-1}{4} \times \frac{3}{3} = \frac{-3}{12}$

ಶ್ರೀ. ಗಣಪತಿ ಕೋಲಾರ (ಜಿ.ಪಿ.ಟಿ)

$\frac{4}{-12}$ ಇದು $\frac{-3}{12}$ ಕ್ಕಿಂತ ಕಡಿಮೆ

$\therefore \frac{1}{-3} < \frac{-1}{4}$

ಎಫ್) $\frac{5}{-11}$ $\square$ $\frac{-5}{11}$

ಸಮ ಛೇದಗಳಾಗಿ ಪರಿವರ್ತಿಸಲು

$\frac{5}{-11} \times \frac{-1}{-1} = \frac{-5}{11}$, $\frac{-5}{11} \times \frac{1}{1} = \frac{-5}{11}$

$\frac{-5}{11}$ ಇದು $\frac{-5}{11}$ ಗೆ ಸಮವಾಗಿದೆ.

$\therefore \frac{5}{-11} = \frac{-5}{11}$

ಜಿ) $0$ $\square$ $\frac{-7}{6}$

0 ಯು ಋಣಾತ್ಮಕ ಭಾಗಲಬ್ಧ ಸಂಖ್ಯೆಗಿಂತ ದೊಡ್ಡದಾಗಿದೆ.

$\therefore 0 > \frac{-7}{6}$

9. ಪ್ರತಿಯೊಂದರಲ್ಲಿ ಯಾವುದು ದೊಡ್ಡದು?

ಎ) $\frac{2}{3}, \frac{5}{2}$

3 ಮತ್ತು 2 ರ ಲ.ಸಾ.ಅ = 6

$\frac{2}{3} \times \frac{2}{2} = \frac{4}{6}$, $\frac{5}{2} \times \frac{3}{3} = \frac{15}{6}$

$\frac{4}{6}$ ಇದು $\frac{15}{6}$ ಕ್ಕಿಂತ ಚಿಕ್ಕದು

$\therefore \frac{5}{2}$ ದೊಡ್ಡದು

ಬಿ) $\frac{-5}{6}, \frac{-4}{3}$

3 ಮತ್ತು 6 ರ ಲ.ಸಾ.ಅ = 6

$\frac{-5}{6} \times \frac{1}{1} = \frac{-5}{6}$, $\frac{-4}{3} \times \frac{2}{2} = \frac{-8}{6}$

$\frac{-5}{6}$ ಇದು $\frac{-8}{6}$ ಕ್ಕಿಂತ ದೊಡ್ಡದು

$\therefore \frac{-5}{6}$ ದೊಡ್ಡದು

ಸಿ) $\frac{-3}{4}, \frac{2}{-3}$

4 ಮತ್ತು 3 ರ ಲ.ಸಾ.ಅ = 12

$\frac{-3}{4} \times \frac{3}{3} = \frac{-9}{12}$, $-\frac{2}{3} \times \frac{4}{4} = \frac{-8}{12}$

$\frac{-9}{12}$ ಇದು $\frac{-8}{12}$ ಕ್ಕಿಂತ ಚಿಕ್ಕದು

$\therefore -\frac{2}{3}$ ದೊಡ್ಡದು

ಡಿ) $\frac{-1}{4}, \frac{1}{4}$

$\frac{-1}{4}$ ಇದು $\frac{1}{4}$ ಕ್ಕಿಂತ ಚಿಕ್ಕದು

$\therefore \frac{1}{4}$ ದೊಡ್ಡದು

ಇ) $-3\frac{2}{7}, -3\frac{4}{5}$

$\frac{-23}{7}, \frac{-19}{5}$

7 ಮತ್ತು 5 ರ ಲ.ಸಾ.ಅ = 35

$\frac{-23}{7} \times \frac{5}{5} = \frac{-115}{35}$, $\frac{-19}{5} \times \frac{7}{7} = \frac{-133}{35}$

$\frac{-115}{35}$ ಇದು $\frac{-133}{35}$ ಕ್ಕಿಂತ ದೊಡ್ಡದು

$\therefore \frac{-23}{7}$ ಅಥವಾ $-3\frac{2}{7}$ ದೊಡ್ಡದು

10. ಮುಂದಿನ ಭಾಗಲಬ್ಧ ಸಂಖ್ಯೆಗಳನ್ನು ಏರಿಕೆ ಕ್ರಮದಲ್ಲಿ ಬರೆಯಿರಿ.

ಎ) $\frac{-3}{5}, \frac{-2}{5}, \frac{-1}{5}$

ಏರಿಕೆ ಕ್ರಮ : $\frac{-3}{5}, \frac{-2}{5}, \frac{-1}{5}$

ಬಿ) $\frac{-1}{3}, \frac{-2}{9}, \frac{-4}{3}$

3 ಮತ್ತು 9 ರ ಲ.ಸಾ.ಅ =9

$\frac{-1}{3} \times \frac{3}{3} = \frac{-3}{9}$

$\frac{-2}{9} \times \frac{1}{1} = \frac{-2}{9}$

$\frac{-4}{3} \times \frac{3}{3} = \frac{-12}{9}$

ಏರಿಕೆ ಕ್ರಮ : $\frac{-12}{9}, \frac{-3}{9}, \frac{-2}{9}$

ಏರಿಕೆ ಕ್ರಮ : $\frac{-4}{3}, \frac{-1}{3}, \frac{-2}{9}$

ಸಿ) $\frac{-3}{7}, \frac{-3}{2}, \frac{-3}{4}$

ಏರಿಕೆ ಕ್ರಮ : $\frac{-3}{2}, , \frac{-3}{4}, \frac{-3}{7}$

ಶ್ರೀ ಗಣಪತಿ ಕೋಲಾರ (ಜಿ.ಪಿ.ಟಿ)

# ಅಭ್ಯಾಸ 9.2

1. ಮೊತ್ತವನ್ನು ಕಂಡುಹಿಡಿಯಿರಿ.

i) $\frac{5}{4} + \left(\frac{-11}{4}\right)$

$= \frac{5}{4} - \frac{11}{4}$

$= \frac{5-11}{4}$

$= \frac{-6}{4}$

$= \frac{-3}{2}$

ii) $\frac{5}{3} + \frac{3}{5}$

3 ಮತ್ತು 5 ಲ.ಸಾ.ಅ = 15

$\frac{5}{3} \times \frac{5}{5} = \frac{25}{15}$

$\frac{3}{5} \times \frac{3}{3} = \frac{9}{15}$

$= \frac{25}{15} + \frac{9}{15} = \frac{25+9}{15}$

$= \frac{34}{15}$

iii) $\frac{-9}{10} + \frac{22}{15}$

10 ಮತ್ತು 15 ಲ.ಸಾ.ಅ = 30

$\frac{-9}{10} \times \frac{3}{3} = \frac{-27}{30}$  $\frac{22}{15} \times \frac{2}{2} = \frac{44}{30}$

$= \frac{-27}{30} + \frac{44}{30} = \frac{-27+44}{30}$

$= \frac{17}{30}$

iv) $\frac{-3}{-11} + \frac{5}{9}$

11 ಮತ್ತು 9 ಲ.ಸಾ.ಅ = 99

$\frac{-3}{-11} \times \frac{-9}{-9} = \frac{27}{99}$  $\frac{5}{9} \times \frac{11}{11} = \frac{55}{99}$

$= \frac{27}{99} + \frac{55}{99} = \frac{27+55}{99}$

$= \frac{82}{99}$

v) $\frac{-8}{19} + \frac{(-2)}{57}$

19 ಮತ್ತು 57 ಲ.ಸಾ.ಅ = 57

$\frac{-8}{19} \times \frac{3}{3} = \frac{-24}{57}$  $\frac{(-2)}{57} \times \frac{1}{1} = \frac{-2}{57}$

$= \frac{-24}{57} + \frac{(-2)}{57} = \frac{-24+(-2)}{57}$

$= \frac{-24-2}{57} = \frac{-26}{57}$

vi) $\frac{-2}{3} + 0$

$= \frac{-2}{3} + \frac{0}{3} = \frac{-2+0}{3}$

$= \frac{-2}{3}$

vii) $-2\frac{1}{3} + 4\frac{3}{5} = \frac{-7}{3} + \frac{23}{5}$

3 ಮತ್ತು 5 ಲ.ಸಾ.ಅ = 15

$\frac{-7}{3} \times \frac{5}{5} = \frac{-35}{15}$  $\frac{23}{5} \times \frac{3}{3} = \frac{69}{15}$

$= \frac{-35}{15} + \frac{69}{15} = \frac{-35+69}{15}$

$= \frac{34}{15} = 2\frac{4}{15}$

2. ಇವುಗಳ ಬೆಲೆ ಕಂಡುಹಿಡಿಯಿರಿ.

i) $\frac{7}{24} - \frac{17}{36}$

24 ಮತ್ತು 36 ಲ.ಸಾ.ಅ = 72

$\frac{7}{24} \times \frac{3}{3} = \frac{21}{72}$  $\frac{17}{36} \times \frac{2}{2} = \frac{34}{72}$

$= \frac{21}{72} - \frac{34}{72} = \frac{21-34}{72}$

$= \frac{-13}{72}$

ii) $\frac{5}{63} - \left(\frac{-6}{21}\right)$

63 ಮತ್ತು 21 ಲ.ಸಾ.ಅ = 63

$\frac{5}{63} \times \frac{1}{1} = \frac{5}{63}$  $\frac{-6}{21} \times \frac{3}{3} = \frac{-18}{63}$

$= \frac{5}{63} - \left(\frac{-18}{63}\right) = \frac{5-(-18)}{63}$

$= \frac{5+18}{63} = \frac{23}{63}$

iii) $\frac{-6}{13} - \left(\frac{-7}{15}\right)$

13 ಮತ್ತು 15 ಲ.ಸಾ.ಅ = 195

$\frac{-6}{13} \times \frac{15}{15} = \frac{-90}{195}$  $\frac{-7}{15} \times \frac{13}{13} = \frac{-91}{195}$

$= \frac{-90}{195} - \left(\frac{-91}{195}\right) = \frac{-90-(-91)}{195}$

$= \frac{-90+91}{195} = \frac{1}{195}$

iv) $\frac{-3}{8} - \frac{7}{11}$

8 ಮತ್ತು 11 ಲ.ಸಾ.ಅ = 88

$\frac{-3}{8} \times \frac{11}{11} = \frac{-33}{88}$  $\frac{7}{11} \times \frac{8}{8} = \frac{56}{88}$

$= \frac{-33}{88} - \frac{56}{88} = \frac{-33-56}{88}$

$= \frac{-89}{88}$

ಶ್ರೀ ಗಣಪತಿ ಕೋಲಾರ (ಜಿ.ಪಿ.ಟಿ)

v) $-2\frac{1}{9} - 6 = \frac{-19}{9} - \frac{6}{1}$

9 ಮತ್ತು 1 ಲ.ಸಾ.ಅ = 9

$\frac{-19}{9} \times \frac{1}{1} = \frac{-19}{9}$ $\frac{6}{1} \times \frac{9}{9} = \frac{54}{9}$

$= \frac{-19}{9} - \frac{54}{9} = \frac{-19-54}{9}$

$= \frac{-73}{9}$

3. ಗುಣಲಬ್ಧ ಕಂಡುಹಿಡಿಯಿರಿ.

i) $\frac{9}{2} \times \left(\frac{-7}{4}\right)$

$= \frac{9\times(-7)}{2\times4} = \frac{-63}{8}$

ii) $\frac{3}{10} \times (-9)$

$= \frac{3\times(-9)}{10\times1} = \frac{-27}{10}$

iii) $\frac{-6}{5} \times \frac{9}{11}$

$= \frac{-6\times9}{5\times11} = \frac{-54}{55}$

iv) $\frac{3}{7} \times \left(\frac{-2}{5}\right)$

$= \frac{3\times(-2)}{7\times5} = \frac{-6}{35}$

v) $\frac{3}{11} \times \frac{2}{5}$

$= \frac{3\times2}{11\times5} = \frac{6}{55}$

vi) $\frac{3}{-5} \times \frac{-5}{3}$

$= \frac{3\times(-5)}{-5\times3} = \frac{-15}{-15} = 1$

4. ಇವುಗಳ ಬೆಲೆ ಕಂಡುಹಿಡಿಯಿರಿ.

i) $(-4) \div \frac{2}{3}$

$= \frac{-4}{1} \times \frac{3}{2}$

$= \frac{-4\times3}{1\times2} = \frac{-12}{2}$

$= 6$

ii) $\frac{-3}{5} \div 2$

$= \frac{-3}{5} \times \frac{1}{2}$

$= \frac{-3\times1}{5\times2} = \frac{-3}{10}$

iii) $\frac{-4}{5} \div (-3)$

$= \frac{-4}{5} \times \frac{1}{-3}$

$= \frac{-4\times1}{5\times(-3)} = \frac{-4}{-15} = \frac{4}{15}$

iv) $\frac{-1}{8} \div \frac{3}{4}$

$= \frac{-1}{8} \times \frac{4}{3}$

$= \frac{-1\times4}{8\times3} = \frac{-4}{24} = \frac{-1}{6}$

v) $\frac{-7}{12} \div \left(\frac{-2}{13}\right)$

$= \frac{-7}{12} \times \frac{13}{-2}$

$= \frac{-7\times13}{12\times(-2)} = \frac{-91}{-24} = \frac{91}{24}$

vi) $\frac{-2}{13} \div \frac{1}{7}$

$= \frac{-2}{13} \times \frac{7}{1}$

$= \frac{-2\times7}{13\times1} = \frac{-14}{13}$

vii) $\frac{3}{13} \div \left(\frac{-4}{65}\right)$

$= \frac{3}{13} \times \frac{65}{-4}$

$= \frac{3\times65}{13\times(-4)} = \frac{-15}{4}$

# ಅಧ್ಯಾಯ – 10
# ಪ್ರಯೋಗಿಕ ರೇಖಾಗಣಿತ

## ಅಭ್ಯಾಸ 10.1

1. AB ರೇಖೆಯನ್ನು ಎಳೆದು, ಅದರ ಹೊರಗೆ C ಬಿಂದುವನ್ನು ಗುರುತಿಸಿ. ಸ್ಕೇಲ್ ( ಅಳತೆ ಪಟ್ಟಿ) ಮತ್ತು ಕೈವಾರವನ್ನು ಮಾತ್ರ ಉಪಯೋಗಿಸಿ C ಯ ಮೂಲಕ AB ಗೆ ರೇಖೆಯನ್ನು ಎಳೆಯಿರಿ.




**ಹಂತಗಳು** :

ಎ) AB ರೇಖೆಯನ್ನು ಎಳೆಯಿರಿ. ಇದರ ಹೊರಗೆ C ಬಿಂದುವನ್ನು ಗುರುತಿಸಿ. AB ರೇಖೆಗೆ ಎಳೆಯಬೇಕಾದರೆ C ಬಿಂದುವಿನ ಮೂಲಕ ಹಾದು ಹೋಗುವಂತೆ ಒಂದು ರೇಖೆಯನ್ನು ಎಳೆಯಿರಿ. ಆ ರೇಖೆಯು l ಆಗಿರಲಿ.

ಬಿ) 'C' ಬಿಂದುವಿನಲ್ಲಿ ಸೂಕ್ತವಾದ ತ್ರಿಜ್ಯದೊಂದಿಗೆ ಒಂದು ಕಂಸವನ್ನು ಎಳೆಯಿರಿ. ಇದು l ರೇಖೆಯನ್ನು P ಮತ್ತು Q ಬಿಂದುವಿನಲ್ಲಿ ಕತ್ತರಿಸುತ್ತದೆ.

ಸಿ) 'P' ಬಿಂದುವಿನಿಂದ ಅದೇ ತ್ರಿಜ್ಯದೊಂದಿಗೆ PQ ಕಂಸವನ್ನು ಎರಡು ಸಲ ಕತ್ತರಿಸಿ ಅದು m ಮತ್ತು n ಆಗಿರಲಿ.

ಡಿ) m ಮತ್ತು n ಬಿಂದುವಿನಿಂದ ಅದೇ ತ್ರಿಜ್ಯದಲ್ಲಿ AB ರೇಖೆಯ ಕಡೆ ಪರಸ್ಪರ ಕತ್ತರಿಸುವಂತೆ ಕಂಸವನ್ನು ಎಳೆಯಿರಿ. ಆ ಬಿಂದು R ಆಗಿರಲಿ.

ಇ) CRB ಮತ್ತು CRA ಲಂಬಕೋನಗಳು ಮತ್ತು CR ಲಂಬವಾಗಿದೆ. AB ಇದೇ ರೇಖೆಗೆ ಎಳೆದ ಲಂಬ.

2. *l* ರೇಖೆಯನ್ನು ಎಳೆದು, ಅದರ ಮೇಲಿನ ಯಾವುದಾದರೂ ಒಂದು ಬಿಂದುವಿನಲ್ಲಿ *l* ಗೆ ಲಂಬವನ್ನು ಎಳೆಯಿರಿ. ಲಂಬ ರೇಖೆಯ ಮೇಲೆ, *l* ಬಿಂದುವಿನಿಂದ 4 cm ದೂರದಲ್ಲಿರುವಂತೆ X ನ್ನು ಗುರ್ತಿಸಿ. X ನ ಮೂಲಕ *l* ಗೆ ಸಮಾಂತರವಾಗಿ m ರೇಖೆಯನ್ನು ಎಳೆಯಿರಿ.




**ಹಂತಗಳು :**

ಎ) *l* ರೇಖೆಯನ್ನು ಎಳೆಯಿರಿ. *l* ರೇಖೆಯ ಮೇಲೆ C ಬಿಂದುವನ್ನು ಗುರುತಿಸಿ..

ಬಿ) A ಬಿಂದುವಿನಿಂದ 90° ಕೋನವನ್ನು (ಇಂಚುಪಟ್ಟಿ ಮತ್ತು ಕೈವಾರದ ಸಹಾಯದಿಂದ ) ರಚಿಸಿ, ಆ L ಬಿಂದು AL ನ್ನು ಸೇರಿಸಿ. ಇದು ರೇಖೆಗೆ ಲಂಬವಾಗಿದೆ.

ಸಿ) AX = 4 ಸೆಂ.ಮೀ ಇರುವಂತೆ AL ರೇಖೆಯ ಮೇಲೆ X ಬಿಂದುವನ್ನು ಗುರ್ತಿಸಿ.

ಡಿ) X ಬಿಂದುವಿನಲ್ಲಿ 90° ಕೋನವನ್ನು ರಚಿಸಿ, ಅದು C ಆಗಿರಲಿ XC ಸೇರಿಸಿ

ಇ) XC ರೇಖೆಯು ( m ರೇಖೆ) ನಮಗೆ ಬೇಕಾಗಿರುವ l ನ ಸಮಾಂತರ ರೇಖೆ.

3. *l* ಒಂದು ರೇಖೆ ಮತ್ತು ಆ ರೇಖೆ ಮೇಲಿಲ್ಲದ್ದ ಒಂದು ಬಿಂದು (ಬಾಹ್ಯಬಿಂದು) P ಆಗಿರಲಿ. P ಯ ಮೂಲಕ *l* ಗೆ ಸಮಾಂತರವಾಗಿ ರೇಖೆ m ನ್ನು ಎಳೆಯಿರಿ. ಈಗ P ಯನ್ನು *l* ಮೇಲಿನ ಯಾವುದಾದರೂ ಒಂದು ಬಿಂದು Q ಗೆ ಸೇರಿಸಿ. m ನ ಮೇಲೆ ಯಾವುದಾದರೂ ಒಂದು ಬಿಂದು R ನ್ನು ಗುರ್ತಿಸಿ. R ನ ಮೂಲಕ PQ ಗೆ ಒಂದು ಸಮಾನಾಂತರ ರೇಖೆ ಎಳೆಯಿರಿ. ಈ ರೇಖೆಯು *l* ನ್ನು S ನಲ್ಲಿ ಸಂಧಿಸಲಿ. ಈ ಎರಡು ಸಮಾಂತರ ರೇಖೆಗಳಿಂದ ಆವೃತವಾದ ಆಕೃತಿ ಯಾವುದು?




ಹಂತಗಳು :

ಎ) $l$ ರೇಖೆಯನ್ನು ಎಳೆಯಿರಿ. P ಒಂದು ಬಾಹ್ಯ ಬಿಂದುವನ್ನು ಗುರ್ತಿಸಿ $l$ ರೇಖೆಯ ಮೇಲೆ Q ಬಿಂದುವನ್ನು ಗುರ್ತಿಸಿ, PQ ನ್ನು ಸೇರಿಸಿ.

ಬಿ) $l$ ರೇಖೆಗೆ ಸಮಾಂತರವಾದ m ರೇಖೆಯನ್ನು ಚಿತ್ರದಲ್ಲಿ ತೋರಿಸಿರುವಂತೆ ಎಳೆಯಿರಿ.

ಸಿ) m ರೇಖೆಯ ಮೇಲೆ R ಬಿಂದುವನ್ನು ಗುರ್ತಿಸಿ RQ ನ್ನು ಸೇರಿಸಿ.

ಡಿ) R ಮೂಲಕ n ರೇಖೆಯನ್ನು PQ ಗೆ ಸಮಾಂತರವಾಗಿ ಎಳೆಯಿರಿ. N ರೇಖೆಯು $l$ ರೇಖೆಯನ್ನು S ಬಿಂದುವಿನಲ್ಲಿ ಸಂಧಿಸಲಿ.

ಇ) ಈ ಎರಡು ಸಮಾಂತರ ರೇಖೆಗಳಿಂದ ಆವೃತವಾದ ಆಕೃತಿಯು ಸಮಾಂತರ ಚತುರ್ಭುಜವಾಗಿರುತ್ತದೆ.

## ಅಭ್ಯಾಸ 10.2

1. XY = 4.5 cm, YZ = 5 cm ಮತ್ತು ZX = 6 cm ಅಳತೆಯಿರುವ ΔXYZ ರಚಿಸಿ.




2. ಬಾಹುವಿನ ಅಳತೆ 5.5 cm ಇರುವ ಸಮಬಾಹು ತ್ರಿಭುಜ ರಚಿಸಿ.




3. PQ = 4 cm, QR = 3.5 cm ಮತ್ತು PR = 4 cm ಅಳತೆಯಿರುವ ΔPQR ರಚಿಸಿ. ಈ ತ್ರಿಭುಜದ ವಿಧ ಯಾವುದು?




ಇದು ಸಮದ್ವಿಬಾಹು ತ್ರಿಭುಜವಾಗಿದೆ.

4. AB = 2.5 cm, BC = 6 cm ಮತ್ತು AC = 6.5 cm ಅಳತೆಯಿರುವ ΔABC ರಚಿಸಿ. ∠B ಅಳತೆ ಮಾಡಿ.




$\angle B = 90°$

## ಅಭ್ಯಾಸ 10.3

1. DE = 5 cm, DF = 3 cm ಮತ್ತು m∠EDF = 90° ಇರುವಂತೆ ΔDEF ರಚಿಸಿ.




2. ಸಮದ್ವಿಬಾಹು ತ್ರಿಭುಜದ ಪ್ರತಿ ಸಮ ಬಾಹುವಿನ ಅಳತೆ 6.5 cm ಮತ್ತು ಅವುಗಳ ನಡುವಿನ ಕೋನ 110° ಇರುವಂತೆ ಒಂದು ಸಮದ್ವಿಬಾಹು ತ್ರಿಭುಜ ರಚಿಸಿ.




3. BC = 7.50cm, AC = 5 cm ಮತ್ತು ∠C = 60° ಇರುವಂತೆ ΔABC ರಚಿಸಿ




## ಅಭ್ಯಾಸ 10.4

1. m∠A = 60°, m∠B = 30° ಮತ್ತು AB = 5.8 cm ಇರುವಂತೆ ΔABC ರಚಿಸಿ.




2. PQ = 5 cm, m∠PQR = 105°, ಮತ್ತು m∠QRP = 40°, ಇರುವಂತೆ ΔPQR ರಚಿಸಿ. (ಸುಳಿವು ತ್ರಿಭುಜದ ಮೂರು ಒಳಕೋನಗಳ ಮೊತ್ತದ ಗುಣವನ್ನು ಸ್ಮರಿಸಿ)




3. EF = 7.2 cm, . m∠E = 110°, ಮತ್ತು m∠F = 80° ಅಳತೆಯಿರುವ , ΔDEF ರಚಿಸಬಹುದೇ ಪರೀಕ್ಷಿಸಿ. ನಿಮ್ಮ ಉತ್ತರವನ್ನು ಸಮರ್ಥಿಸಿ.

∠E + ∠F = 110 + 80 = 190°

ಈ ಅಳತೆಯಿರುವ ತ್ರಿಭುಜವನ್ನು ರಚಿಸಲು ಸಾಧ್ಯವಿಲ್ಲ. ಏಕೆಂದರೆ ಎರಡು ಕೋನಗಳ ಮೊತ್ತವು 180° ಗಿಂತ ಹೆಚ್ಚಾಗುತ್ತದೆ. ತ್ರಿಭುಜದ ಮೂರು ಒಳಕೋನಗಳ ಮೊತ್ತವು 180° ಮಾತ್ರ ಇರಬೇಕು. ಆದುದರಿಂದ ಈ ಆಳತೆಯ ತ್ರಿಭುಜವನ್ನು ರಚಿಸಲು ಸಾಧ್ಯವಿಲ್ಲ.

# ಅಭ್ಯಾಸ 10.5

1. m∠Q = 90°, QR = 8cm ಮತ್ತು PR = 10cm ಇರುವಂತೆ ಲಂಬಕೋನ ತ್ರಿಭುಜ PQR ರಚಿಸಿ.




2. ವಿಕರ್ಣದ ಅಳತೆ 6 cm ಮತ್ತು ಲಂಬಕೋನವನ್ನೊಳಗೊಂಡ ಒಂದು ಬಾಹು 4 cm ಇರುವಂತೆ ಲಂಬಕೋನ ತ್ರಿಭುಜ ರಚಿಸಿ.




3. m∠ACB = 90° ಇರುವಂತೆ ಮತ್ತು AC = 6 cm ಇರುವಂತೆ ABC ಒಂದು ಸಮದ್ವಿಬಾಹು ಲಂಬಕೋನ ತ್ರಿಭುಜ ABC ಯನ್ನು ರಚಿಸಿ.




ಶ್ರೀ ಗಣಪತಿ ಕೋಲಾರ (ಜಿ.ಪಿ.ಟಿ)

# ಅಧ್ಯಾಯ – 11
# ಸುತ್ತಳತೆ ಮತ್ತು ವಿಸ್ತೀರ್ಣ

## ಅಭ್ಯಾಸ 11.1

1. ಆಯತಾಕಾರದ ಭೂಮಿಯ ಉದ್ದ ಮತ್ತು ಅಗಲ ಕ್ರಮವಾಗಿ 500 m ಮತ್ತು 300 m ಆದರೆ ಇವುಗಳನ್ನು ಕಂಡುಹಿಡಿಯಿರಿ. (i) ಭೂಮಿಯ ವಿಸ್ತೀರ್ಣ (ii) $1m^2$ಭೂಮಿಯ ಬೆಲೆ ರೂ.10,000 ಆದರೆ, ಭೂಮಿಯ ಒಟ್ಟು ಬೆಲೆ.

➢ ಆಯತಾಕಾರದ ಭೂಮಿಯ ಉದ್ದ= 500 m
ಅಗಲ =300 m

(i) ಆಯತಾಕಾರದ ಭೂಮಿಯ ವಿಸ್ತೀರ್ಣ
= ಉದ್ದ × ಅಗಲ
= 500 × 300
= $1,50,000\ m^2$ ಅಥವಾ ಚ.ಮೀ

(ii) $1m^2$ಭೂಮಿಯ ಬೆಲೆ ರೂ.10,000 ಆದರೆ, ಭೂಮಿಯ ಒಟ್ಟು ಬೆಲೆ. = 10,000 × 1,50,000
= ರೂ. 1,500,000,000

2. ಸುತ್ತಳತೆ 320 m ಇರುವ ಚೌಕಾಕಾರದ ಉದ್ಯಾನವನದ ವಿಸ್ತೀರ್ಣ ಕಂಡುಹಿಡಿಯಿರಿ.

➢ ಚೌಕಾಕಾರದ ಉದ್ಯಾನವನದ ಸುತ್ತಳತೆ = 320 m
ಚೌಕದ ಸುತ್ತಳತೆ =4 × ಬಾಹು
320 = 4 × ಬಾಹು
ಬಾಹು = $\frac{320}{4}$
ಬಾಹು = 80 m
ಚೌಕಾಕಾರದ ಉದ್ಯಾನವನದ ವಿಸ್ತೀರ್ಣ
= ಬಾಹು$^2$
=$80^2$ = 80 × 80
=6400 $m^2$ ಅಥವಾ ಚ.ಮೀ

3. ವಿಸ್ತೀರ್ಣ 440 $m^2$ ಮತ್ತು ಉದ್ದ 22 m ಇರುವ ಆಯತಾಕಾರದ ಭೂಮಿಯ ಅಗಲ ಮತ್ತು ಸುತ್ತಳತೆಯನ್ನು ಕಂಡುಹಿಡಿಯಿರಿ.

➢ ಆಯತಾಕಾರದ ಭೂಮಿಯ ವಿಸ್ತೀರ್ಣ = 440 $m^2$
ಆಯತಾಕಾರದ ಭೂಮಿಯ ಉದ್ದ = 22 m

ಆಯತಾಕಾರದ ಭೂಮಿಯ ವಿಸ್ತೀರ್ಣ
= ಉದ್ದ × ಅಗಲ
440 = 22 × ಅಗಲ
ಅಗಲ = $\frac{440}{22}$
ಅಗಲ = 20 m

ಆಯತಾಕಾರದ ಭೂಮಿಯ ಸುತ್ತಳತೆ
= 2(ಉದ್ದ + ಅಗಲ)
= 2(22 + 20)
= 2 × 42
= 84 m

4. ಆಯತಾಕಾರದ ಹಾಳೆಯ ಸುತ್ತಳತೆ 100 cm ಇದೆ. ಉದ್ದ 35 cm ಆದರೆ ಅದರ ಅಗಲ ಮತ್ತು ವಿಸ್ತೀರ್ಣ ಕಂಡುಹಿಡಿಯಿರಿ.

➢ ಆಯತಾಕಾರದ ಹಾಳೆಯ ಸುತ್ತಳತೆ = 100 cm
ಉದ್ದ = 35 cm
ಆಯತಾಕಾರದ ಹಾಳೆಯ ಸುತ್ತಳತೆ
= 2(ಉದ್ದ + ಅಗಲ)
100 = 2(35 + ಅಗಲ)
(35 + ಅಗಲ) = $\frac{100}{2}$
(35 + ಅಗಲ) = 50
ಅಗಲ = 50 – 35
ಅಗಲ = 15 cm

ಆಯತಾಕಾರದ ಭೂಮಿಯ ವಿಸ್ತೀರ್ಣ
= ಉದ್ದ × ಅಗಲ
= 35 × 15
= 525 $cm^2$ ಅಥವಾ ಚ.ಸೆಂ.ಮೀ

5.ಚೌಕಾಕಾರದ ತೋಟದ ವಿಸ್ತೀರ್ಣವು ಆಯತಾಕಾರದ ತೋಟದ ವಿಸ್ತೀರ್ಣಕ್ಕೆ ಸಮವಾಗಿದೆ. ಚೌಕಾಕಾರದ ತೋಟದ ಬಾಹುವಿನ ಉದ್ದ 60 m ಮತ್ತು ಆಯತಾಕಾರದ ತೋಟದ ಉದ್ದ 90 m ಆದರೆ ಆಯಾತಾಕಾರದ ತೋಟದ ಅಗಲವನ್ನು ಕಂಡುಹಿಡಿಯಿರಿ.

➢ ಚೌಕಾಕಾರದ ತೋಟದ ಬಾಹುವಿನ ಉದ್ದ = 60m
ಚೌಕಾಕಾರದ ತೋಟದ ವಿಸ್ತೀರ್ಣ = ಬಾಹು$^2$
=$60^2$
= 60 × 60
=3600 $m^2$ ಅಥವಾ ಚ.ಮೀ

ಆಯತಾಕಾರದ ತೋಟದ ಉದ್ದ = 90 m

ಆಯತಾಕಾರದ ತೋಟದ ವಿಸ್ತೀರ್ಣ
= ಉದ್ದ × ಅಗಲ
3600 = 90 × ಅಗಲ
ಅಗಲ = $\frac{3600}{90}$
ಅಗಲ = 40 m

6. ಒಂದು ತಂತಿಯು ಆಯತಾಕಾರದಲ್ಲಿದೆ. ಅದರ ಉದ್ದ 40 cm ಮತ್ತು ಅಗಲ 22 cm ಇದೆ. ಇದೇ

ಶ್ರೀ.ಗಣಪತಿ ಕೋಲಾರ (ಜಿ.ಪಿ.ಟಿ)

ತಂತಿಯನ್ನು ಚೌಕಾಕಾರಕ್ಕೆ ಬಾಗಿಸಿದರೆ, ಅದರ ಪ್ರತಿ ಬಾಹುವಿನ ಉದ್ದ ಎಷ್ಟಾಗುತ್ತದೆ? ಹಾಗೂ ಯಾವ ಆಕೃತಿಯು ಹೆಚ್ಚು ವಿಸ್ತೀರ್ಣವನ್ನು ಆವರಿಸುತ್ತದೆ ಎಂಬುದನ್ನು ಕಂಡುಹಿಡಿಯಿರಿ.

➢ ಆಯತಾಕಾರದ ತಂತಿಯ ಉದ್ದ = 40 cm

ಅಗಲ =22 cm

ಆಯತಾಕಾರದ ತಂತಿಯ ಸುತ್ತಳತೆ

= 2(ಉದ್ದ + ಅಗಲ)

= 2(40 + 22)

= 2 × 62

= 124 cm

ಚೌಕದ ಸುತ್ತಳತೆ = 4 × ಬಾಹು

124 = 4 × ಬಾಹು

ಬಾಹು = $\frac{124}{4}$

ಬಾಹು = 31 cm

ಅದೇ ತಂತಿಯನ್ನು ಚೌಕಾಕಾರಕ್ಕೆ ಬಾಗಿಸಿದರೆ ಅದರ ಪ್ರತಿ ಬಾಹುವಿನ ಉದ್ದ = 31 cm

ಆಯತಾಕಾರದ ತಂತಿಯ ವಿಸ್ತೀರ್ಣ

= ಉದ್ದ × ಅಗಲ

= 40 × 22

= 880 $cm^2$ ಅಥವಾ ಚ.ಸೆಂ.ಮೀ

ಚೌಕಾಕಾರದ ತೋಟದ ವಿಸ್ತೀರ್ಣ = ಬಾಹು$^2$

= $31^2$

= 31 × 31

=961 $cm^2$ ಅಥವಾ ಚ.ಮೀ

ಚೌಕಾಕೃತಿಯು ಹೆಚ್ಚು ವಿಸ್ತೀರ್ಣವನ್ನು ಆವರಿಸುತ್ತದೆ.

7. ಆಯತದ ಸುತ್ತಳತೆ 130 cm ಇದೆ. ಆಯತದ ಅಗಲ 30 cm ಆಗಿದ್ದರೆ. ಅದರ ಉದ್ದವೆಷ್ಟು? ಹಾಗೂ ಆಯತದ ವಿಸ್ತೀರ್ಣವನ್ನು ಕಂಡುಹಿಡಿಯಿರಿ.

➢ ಆಯತದ ಸುತ್ತಳತೆ =130 cm ಮತ್ತು ಅಗಲ= 30 cm

ಆಯತದ ಸುತ್ತಳತೆ = 2(ಉದ್ದ + ಅಗಲ)

130 = 2(ಉದ್ದ + 30)

ಉದ್ದ + 30 = $\frac{130}{2}$

ಉದ್ದ + 30 = 65

ಉದ್ದ = 65 − 30

ಉದ್ದ = 35 cm

ಆಯತದ ವಿಸ್ತೀರ್ಣ = ಉದ್ದ × ಅಗಲ

= 35 × 30

= 10650 $cm^2$ ಅಥವಾ ಚ.ಸೆಂ.ಮೀ

8. 2 m ಉದ್ದ 1 m ಅಗಲದ ಬಾಗಿಲನ್ನು ಗೋಡೆಗೆ ಅಳವಡಿಸಿದೆ. ಗೋಡೆಯ ಉದ್ದ 4.5 m ಮತ್ತು ಅಗಲವು 3.6 m ಇದೆ. ಪ್ರತಿ ಚದರ ಮೀಟರ್‌ಗೆ ರೂ. 20 ರಂತೆ ಗೋಡೆಗೆ ಬಣ್ಣ ಹಚ್ಚಲು ತಗುಲುವ ವೆಚ್ಚ ಕಂಡುಹಿಡಿಯಿರಿ.



ಗೋಡೆಯ ವಿಸ್ತೀರ್ಣ = ಉದ್ದ × ಅಗಲ

= 4.5 × 3.6

= 16.20 $m^2$

ಬಾಗಿಲ ವಿಸ್ತೀರ್ಣ = ಉದ್ದ × ಅಗಲ

= 2 × 1

= 2 $m^2$

ಬಾಗಿಲನ್ನು ಹೊರತು ಪಡಿಸಿ ಗೋಡೆಯ ವಿಸ್ತೀರ್ಣ = 16.2 − 2 = 14.2 $m^2$

ಪ್ರತಿ ಚದರ ಮೀಟರ್‌ಗೆ ರೂ. 20 ರಂತೆ ಗೋಡೆಗೆ ಬಣ್ಣ ಹಚ್ಚಲು ತಗುಲುವ ವೆಚ್ಚ = 20 × 14.2

= ರೂ. 284.0

ಶ್ರೀ ಗಣಪತಿ ಕೋಲಾರ (ಜಿ.ಪಿ.ಟಿ)

# ಅಭ್ಯಾಸ 11.2

1. ಮುಂದಿನ ಪ್ರತಿಯೊಂದು ಸಮಾಂತರ ಚತುರ್ಭುಜದ ವಿಸ್ತೀರ್ಣವನ್ನು ಕಂಡುಹಿಡಿಯಿರಿ.

a)



(a)

ಪಾದ = b =7 cm
ಎತ್ತರ = h = 4 cm
ಸಮಾಂತರ ಚತುರ್ಭುಜದ ವಿಸ್ತೀರ್ಣ
= ಪಾದ × ಎತ್ತರ
= 7 × 4
= 28 $cm^2$

b)



(b)

ಪಾದ = b =5 cm
ಎತ್ತರ = h = 3 cm
ಸಮಾಂತರ ಚತುರ್ಭುಜದ ವಿಸ್ತೀರ್ಣ
= ಪಾದ × ಎತ್ತರ
= 5 × 3
= 15 $cm^2$

c)



(c)

ಪಾದ = b =2.5 cm
ಎತ್ತರ = h = 3.5 cm
ಸಮಾಂತರ ಚತುರ್ಭುಜದ ವಿಸ್ತೀರ್ಣ
= ಪಾದ × ಎತ್ತರ
= 2.5 × 3.5
= 8.75 $cm^2$

d)




ಪಾದ = b =4.8 cm
ಎತ್ತರ = h = 5 cm
ಸಮಾಂತರ ಚತುರ್ಭುಜದ ವಿಸ್ತೀರ್ಣ
= ಪಾದ × ಎತ್ತರ
= 4.8 × 5
= 24.0 $cm^2$

e)




ಪಾದ = b =4.4 cm
ಎತ್ತರ = h = 2 cm
ಸಮಾಂತರ ಚತುರ್ಭುಜದ ವಿಸ್ತೀರ್ಣ
= ಪಾದ × ಎತ್ತರ
= 4.4 × 2
= 8.8 $cm^2$

2. ಪ್ರತಿ ತ್ರಿಭುಜದ ವಿಸ್ತೀರ್ಣವನ್ನು ಕಂಡುಹಿಡಿಯಿರಿ.

a)




ಪಾದ = b =4 cm
ಎತ್ತರ = h = 3 cm
ತ್ರಿಭುಜದ ವಿಸ್ತೀರ್ಣ $= \frac{1}{2}$ × ಪಾದ × ಎತ್ತರ
$= \frac{1}{2} \times 4 \times 3$
= 6 $cm^2$

b)




ಪಾದ = b =5 cm
ಎತ್ತರ = h = 3.2 cm
ತ್ರಿಭುಜದ ವಿಸ್ತೀರ್ಣ $= \frac{1}{2}$ × ಪಾದ × ಎತ್ತರ
$= \frac{1}{2} \times 5 \times 3.2$
= 8 $cm^2$

c)



ಪಾದ = b =3 cm
ಎತ್ತರ = h = 4 cm
ತ್ರಿಭುಜದ ವಿಸ್ತೀರ್ಣ $= \frac{1}{2} \times$ ಪಾದ $\times$ ಎತ್ತರ
$= \frac{1}{2} \times 3 \times 4$
$= 6\ cm^2$

d)




ಪಾದ = b =3 cm
ಎತ್ತರ = h = 2 cm
ತ್ರಿಭುಜದ ವಿಸ್ತೀರ್ಣ $= \frac{1}{2} \times$ ಪಾದ $\times$ ಎತ್ತರ
$= \frac{1}{2} \times 3 \times 2$
$= 3\ cm^2$

3. ಬಿಟ್ಟು ಹೋಗಿರುವ ಬೆಲೆಗಳನ್ನು ಕಂಡುಹಿಡಿಯಿರಿ.

| ಕ್ರ.ಸಂ | ಪಾದ | ಎತ್ತರ | ಸಮಾಂತರ ಚತುರ್ಭುಜದ ವಿಸ್ತೀರ್ಣ |
|---|---|---|---|
| a. | 20 cm | 12.3 cm | 246 cm² |
| b. | 10.3 cm | 15 cm | 154.5 cm² |
| c. | 5.8 cm | 8.4 cm | 48.72 cm² |
| d. | 15.6 cm | 1.05 cm | 16.38 cm² |

a) ಪಾದ = b =20 cm
ವಿಸ್ತೀರ್ಣ = A =246 cm²
ಎತ್ತರ = h = ?
ಸಮಾಂತರ ಚತುರ್ಭುಜದ ವಿಸ್ತೀರ್ಣ
= ಪಾದ $\times$ ಎತ್ತರ
$246 = 2 \times h$
$h = \frac{246}{20}$
$h = 12.3$ cm

b) ಎತ್ತರ = h = 15 cm
ವಿಸ್ತೀರ್ಣ = A =154.5 cm²
ಪಾದ = b =?
ಸಮಾಂತರ ಚತುರ್ಭುಜದ ವಿಸ್ತೀರ್ಣ
= ಪಾದ $\times$ ಎತ್ತರ
$154.5 = b \times 15$
$b = \frac{154.5}{15}$
$h = 10.3$ cm

c) ಎತ್ತರ = h = 8.4 cm
ವಿಸ್ತೀರ್ಣ = A =48.72 cm²
ಪಾದ = b =?
ಸಮಾಂತರ ಚತುರ್ಭುಜದ ವಿಸ್ತೀರ್ಣ
= ಪಾದ $\times$ ಎತ್ತರ
$48.72 = b \times 8.4$
$b = \frac{48.72}{8.4}$
$h = 5.8$ cm

d) ಪಾದ = b =15.6 cm
ವಿಸ್ತೀರ್ಣ = A =16.38 cm²
ಎತ್ತರ = h = ?
ಸಮಾಂತರ ಚತುರ್ಭುಜದ ವಿಸ್ತೀರ್ಣ
= ಪಾದ $\times$ ಎತ್ತರ
$16.38 = 15.6 \times h$
$h = \frac{16.38}{15.6}$
$h = 1.05$ cm

4. ಬಿಟ್ಟು ಹೋಗಿರುವ ಬೆಲೆಗಳನ್ನು ಕಂಡುಹಿಡಿಯಿರಿ.

| ಕ್ರ.ಸಂ | ಪಾದ | ಎತ್ತರ | ತ್ರಿಭುಜದ ವಿಸ್ತೀರ್ಣ |
|---|---|---|---|
| a. | 15 cm | 11.6 cm | 87 cm² |
| b. | 80 cm | 31.4 cm | 1256 cm² |
| c. | 22 cm | 15.5 cm | 170.5 cm² |

a) ಪಾದ = b =15 cm
ವಿಸ್ತೀರ್ಣ = A =87 cm²
ಎತ್ತರ = h = ?
ತ್ರಿಭುಜದ ವಿಸ್ತೀರ್ಣ $= \frac{1}{2} \times$ ಪಾದ $\times$ ಎತ್ತರ
$87 = \frac{1}{2} \times 15 \times h$
$87 \times 2 = 15h$
$h = \frac{87 \times 2}{15}$
$h = 11.6$ cm

b) ಎತ್ತರ = h = 31.4
ವಿಸ್ತೀರ್ಣ = A =1256 cm²
ಪಾದ = b = ?
ತ್ರಿಭುಜದ ವಿಸ್ತೀರ್ಣ $= \frac{1}{2} \times$ ಪಾದ $\times$ ಎತ್ತರ
$1256 = \frac{1}{2} \times b \times 31.4$
$1256 \times 2 = 31.4h$
$h = \frac{1256 \times 2}{31.4}$
$h = 80$ cm

c) ಪಾದ = b =22 cm
ವಿಸ್ತೀರ್ಣ = A =170.5 cm²
ಎತ್ತರ = h = ?
ತ್ರಿಭುಜದ ವಿಸ್ತೀರ್ಣ $= \frac{1}{2} \times$ ಪಾದ $\times$ ಎತ್ತರ
$170.5 = \frac{1}{2} \times 22 \times h$

ಶ್ರೀ. ಗಣಪತಿ ಕೋಲಾರ (ಜಿ.ಪಿ.ಟಿ)

$$170.5 \times 2 = 22h$$
$$h = \frac{170.5 \times 2}{22}$$
$$h = 15.5 \text{ cm}$$

**5. PQRS ಒಂದು ಸಮಾಂತರ ಚತುರ್ಭುಜವಾಗಿದೆ. Q ನಿಂದ SR ಗಿರುವ ಎತ್ತರ QM ಮತ್ತು Q ನಿಂದ PS ಗಿರುವ ಎತ್ತರ QN ಆಗಿದೆ. SR = 12 cm ಮತ್ತು QM = 7.6 cm ಆದರೆ**




a) ಸಮಾಂತರ ಚತುರ್ಭುಜ PQRS ನ ವಿಸ್ತೀರ್ಣ

ಪಾದ = SR =12 cm

ಎತ್ತರ = QM = 7.6 cm

ಸಮಾಂತರ ಚತುರ್ಭುಜದ ವಿಸ್ತೀರ್ಣ = ಪಾದ × ಎತ್ತರ

$= 12 \times 7.6$

$h = 91.2 \text{ cm}^2$

b) PS = 8 cm ಆದಾಗ QN ನ್ನು ಕಂಡುಹಿಡಿಯಿರಿ.

ಪಾದ = PS = 8 cm

ವಿಸ್ತೀರ್ಣ = A =$91.2 \text{ cm}^2$

ಎತ್ತರ = QN = ?

ಸಮಾಂತರ ಚತುರ್ಭುಜದ ವಿಸ್ತೀರ್ಣ = ಪಾದ × ಎತ್ತರ

$$91.2 = 8 \times QN$$
$$QN = \frac{91.2}{8}$$
$$QN = 11.4 \text{ cm}$$

**6. ಸಮಾಂತರ ಚತುರ್ಭುಜ ABCD ಯ ಎತ್ತರ DL ಮತ್ತು BM ಗಳು ಕ್ರಮವಾಗಿ AB ಮತ್ತು AD ಬಾಹುಗಳ ಮೇಲಿವೆ. AB = 35 cm ಮತ್ತು AD = 49 cm ಮತ್ತು ಸಮಾಂತರ ಚತುರ್ಭುಜದ ವಿಸ್ತೀರ್ಣವು 1470 $\text{cm}^2$ ಆದರೆ BM ಮತ್ತು DL ಗಳ ಉದ್ದ ಕಂಡುಹಿಡಿಯಿರಿ.**




- ಪಾದ = AB = 35 cm

ವಿಸ್ತೀರ್ಣ = A =$1470 \text{ cm}^2$

ಎತ್ತರ = DL = ?

ಸಮಾಂತರ ಚತುರ್ಭುಜದ ವಿಸ್ತೀರ್ಣ = ಪಾದ × ಎತ್ತರ

$$1470 = 35 \times DL$$
$$DL = \frac{1470}{35}$$
$$DL = 42 \text{ cm}$$

- ಪಾದ = AD = 49 cm

ವಿಸ್ತೀರ್ಣ = A =$1470 \text{ cm}^2$

ಎತ್ತರ = BM = ?

ಸಮಾಂತರ ಚತುರ್ಭುಜದ ವಿಸ್ತೀರ್ಣ = ಪಾದ × ಎತ್ತರ

$$1470 = 49 \times BM$$
$$BM = \frac{1470}{49}$$
$$DL = 30 \text{ cm}$$

**7. Δ ABC ಯು A ಯಲ್ಲಿ ಲಂಬಕೋನವನ್ನು ಹೊಂದಿದೆ. AD ಯು BC ಗೆ ಲಂಬವಾಗಿದೆ. AB = 5 cm, BC = 13 cm ಮತ್ತು AC = 12 cm, ಆದರೆ Δ ABC ಯ ವಿಸ್ತೀರ್ಣ ಕಂಡುಹಿಡಿಯಿರಿ ಮತ್ತು AD ಯ ಉದ್ದ ಕಂಡುಹಿಡಿಯಿರಿ.**




- ಪಾದ = AB = 5 cm

ಎತ್ತರ = AC = 12 cm

ತ್ರಿಭುಜದ ವಿಸ್ತೀರ್ಣ $= \frac{1}{2} \times$ ಪಾದ × ಎತ್ತರ

$= \frac{1}{2} \times 5 \times 12$

$= 30 \text{ cm}^2$

ಪಾದ = BC = 13 cm

ವಿಸ್ತೀರ್ಣ = A =$30 \text{ cm}^2$

ಎತ್ತರ = AD = ?

ತ್ರಿಭುಜದ ವಿಸ್ತೀರ್ಣ $= \frac{1}{2} \times$ ಪಾದ × ಎತ್ತರ

$$30 = \frac{1}{2} \times 13 \times AD$$
$$30 \times 2 = 13 \times AD$$
$$AD = \frac{30 \times 2}{13}$$
$$AD = 4.61 \text{ cm}$$

**8. AB = AC = 7.5 cm ಮತ್ತು BC = 9 cm ಇರುವಂತೆ Δ ABC ಸಮದ್ವಿಬಾ ತ್ರಿಭುಜವಾಗಿದೆ. A ಯಿಂದ BC ಗೆ ಎಳೆದ ಎತ್ತರ AD ಯ ಉದ್ದ 6 cm ಆಗಿದೆ. Δ ABC ಯ ವಿಸ್ತೀರ್ಣ ಕಂಡುಹಿಡಿಯಿರಿ. C ಯಿಂದ AB ಗಿರುವ ಎತ್ತರ ಅಂದರೆ CE ಎಷ್ಟಾಗುತ್ತದೆ?**




➢ ಪಾದ = BC = 9 cm

ಎತ್ತರ = AD = 6 cm

ತ್ರಿಭುಜದ ವಿಸ್ತೀರ್ಣ $= \frac{1}{2} \times$ ಪಾದ $\times$ ಎತ್ತರ

$= \frac{1}{2} \times 9 \times 6$

$= 27 \text{ cm}^2$

ಪಾದ = AB = 7.5 cm

ವಿಸ್ತೀರ್ಣ = A = $27 \text{ cm}^2$

ಎತ್ತರ = CE = ?

ತ್ರಿಭುಜದ ವಿಸ್ತೀರ್ಣ $= \frac{1}{2} \times$ ಪಾದ $\times$ ಎತ್ತರ

$27 = \frac{1}{2} \times 7.5 \times \text{CE}$

$27 \times 2 = 7.5 \times \text{CE}$

$\text{CE} = \frac{27 \times 2}{7.5}$

$\text{AD} = 7.2 \text{ cm}$

---

# ಅಭ್ಯಾಸ 11.3

**1. ಮುಂದೆ ನೀಡಿದ ತ್ರಿಜ್ಯಗಳನ್ನು ಹೊಂದಿರುವ ವೃತ್ತಗಳ ಸುತ್ತಳತೆ ಕಂಡುಹಿಡಿಯಿರಿ. ($\pi = \frac{22}{7}$ ಎಂದು ತೆಗೆದುಕೊಳ್ಳಿ)**

a) 14 cm

➢ ತ್ರಿಜ್ಯ (r) = 14 cm

ವೃತ್ತದ ಪರಿಧಿ c $= 2\pi r$

$= 2 \times \frac{22}{7} \times 14$

$= 88 \text{ cm}$

b) 28 mm

➢ ತ್ರಿಜ್ಯ (r) = 28 mm

ವೃತ್ತದ ಪರಿಧಿ c $= 2\pi r$

$= 2 \times \frac{22}{7} \times 28$

$= 176 \text{ mm}$

c) 21 cm

➢ ತ್ರಿಜ್ಯ (r) = 21 cm

ವೃತ್ತದ ಪರಿಧಿ c $= 2\pi r$

$= 2 \times \frac{22}{7} \times 21$

$= 132 \text{ cm}$

**2. ಮುಂದೆ ನೀಡಿರುವ ದತ್ತಾಂಶಗಳಿಂದ ವೃತ್ತಗಳ ವಿಸ್ತೀರ್ಣ ಕಂಡುಹಿಡಿಯಿರಿ. ($\pi = \frac{22}{7}$ ಎಂದು ತೆಗೆದುಕೊಳ್ಳಿ)**

a) ತ್ರಿಜ್ಯ (r) = 14 cm

➢ ತ್ರಿಜ್ಯ (r) = 14 cm

ವೃತ್ತದ ವಿಸ್ತೀರ್ಣ (A) $= \pi r^2$

$= \frac{22}{7} \times 14^2$

$= \frac{22}{7} \times 14 \times 14$

$= 616 cm^2$

b) ವ್ಯಾಸ ($d$)= 49 m

➢ ತ್ರಿಜ್ಯ (r) $= \frac{d}{2} = \frac{49}{2}$ m

ವೃತ್ತದ ವಿಸ್ತೀರ್ಣ (A) $= \pi r^2$

$= \frac{22}{7} \times \left(\frac{49}{2}\right)^2$

$= \frac{22}{7} \times \frac{49}{2} \times \frac{49}{2}$

$= 1{,}886.5 \, cm^2$

c) ತ್ರಿಜ್ಯ (r) = 5 cm

➢ ತ್ರಿಜ್ಯ (r) = 5 cm

ವೃತ್ತದ ವಿಸ್ತೀರ್ಣ (A) = $\pi r^2$

$= \frac{22}{7} \times 5^2$

$= \frac{22}{7} \times 5 \times 5$

$= 78.57\ cm^2$

**3. ವೃತ್ತಾಕಾರದ ಹಾಳೆಯ ಸುತ್ತಳತೆಯು 154 m ಆದರೆ, ತ್ರಿಜ್ಯ ಕಂಡುಹಿಡಿಯಿರಿ. ಹಾಗೂ ಹಾಳೆಯ ವಿಸ್ತೀರ್ಣವನ್ನು ಸಹ ಕಂಡುಹಿಡಿಯಿರಿ. ($\pi = \frac{22}{7}$ ಎಂದು ತೆಗೆದುಕೊಳ್ಳಿ)**

- ವೃತ್ತಾಕಾರದ ಹಾಳೆಯ ಸುತ್ತಳತೆಯು 154 m

  ವೃತ್ತದ ಪರಿಧಿ c = $2\pi r$

  $154 = 2 \times \frac{22}{7} \times r$

  $r = \frac{154 \times 7}{22 \times 2} = \frac{49}{2}$

  $r = 24.5$ m

  ವೃತ್ತಾಕಾರದ ಹಾಳೆಯ ವಿಸ್ತೀರ್ಣ (A) = $\pi r^2$

  $= \frac{22}{7} \times 24.5^2$

  $= \frac{22}{7} \times 24.5 \times 24.55$

  $= 1{,}886.5\ m^2$

**4. 21 m ವ್ಯಾಸವುಳ್ಳ ವೃತ್ತಾಕಾರದ ಉದ್ಯಾನಕ್ಕೆ ಬೇಲಿ ಹಾಕಲು ತೋಟಗಾರನೊಬ್ಬ ಇಚ್ಛಿಸುತ್ತಾನೆ. ಅವನು ಎರಡು ಸುತ್ತು ಬೇಲಿ ನಿರ್ಮಿಸಲು ಕೊಂಡುಕೊಳ್ಳಬೇಕಾದ ಹಗ್ಗದ ಉದ್ದವನ್ನು ಕಂಡುಹಿಡಿಯಿರಿ. ಪ್ರತೀ ಮೀಟರ್‌ಗೆ ರೂ. 4 ರಂತೆ ಹಗ್ಗದ ಬೆಲೆಯನ್ನೂ ಸಹ ಕಂಡುಹಿಡಿಯಿರಿ. ($\pi = \frac{22}{7}$ ಎಂದು ತೆಗೆದುಕೊಳ್ಳಿ)**

- ವೃತ್ತಾಕಾರದ ಉದ್ಯಾನವನದ ವ್ಯಾಸ = 21 m

  ವೃತ್ತಾಕಾರದ ಉದ್ಯಾನವನದ ತ್ರಿಜ್ಯ $= = \frac{d}{2} = \frac{21}{2}$ m

  ವೃತ್ತಾಕಾರದ ಉದ್ಯಾನವನದ ಪರಿಧಿ $= 2\pi r$

  $= 2 \times \frac{22}{7} \times \frac{21}{2}$

  $= 66$ m

  ಒಂದು ಸುತ್ತು ಬೇಲಿ ಹಾಕಲು ಬೇಕಾಗುವ ಹಗ್ಗದ ಉದ್ದ = 66 m

  ಎರಡು ಸುತ್ತು ಬೇಲಿ ಹಾಕಲು ಬೇಕಾಗುವ ಉದ್ದ = $2 \times 66 = 132$ m

  ಒಂದು ಮೀಟರ್ ಹಗ್ಗದ ಬೆಲೆ = ರೂ. 4

  132 ಮೀಟರ್ ಹಗ್ಗದ ಬೆಲೆ = $4 \times 132 =$ ರೂ. 528

**5. 4 cm ತ್ರಿಜ್ಯವುಳ್ಳ ವೃತ್ತಾಕಾರದ ಹಾಳೆಯಿಂದ, 3 cm ತ್ರಿಜ್ಯವುಳ್ಳ ವೃತ್ತವನ್ನು ಹೊರತೆಗೆಯಲಾಗಿದೆ. ಉಳಿದ ಹಾಳೆಯ ವಿಸ್ತೀರ್ಣವನ್ನು ಕಂಡುಹಿಡಿಯಿರಿ. ($\pi = 3.14$ ಎಂದು ತೆಗೆದುಕೊಳ್ಳಿ)**

- 4 cm ತ್ರಿಜ್ಯವುಳ್ಳ ವೃತ್ತಾಕಾರದ ಹಾಳೆಯ ವಿಸ್ತೀರ್ಣ (A) = $\pi r^2$

  $= 3.14 \times 4^2$

  $= 3.14 \times 4 \times 4$

  $= 50.24\ cm^2$

  3 cm ತ್ರಿಜ್ಯವುಳ್ಳ ವೃತ್ತಾಕಾರದ ಹಾಳೆಯ ವಿಸ್ತೀರ್ಣ (A) = $\pi r^2$

  $= 3.14 \times 3^2$

  $= 3.14 \times 3 \times 3$

  $= 28.26\ cm^2$

  ಉಳಿದ ಹಾಳೆಯ ವಿಸ್ತೀರ್ಣ = 50.24 – 28.26

  $= 21.98\ cm^2$

**6. ಸಾಯಿಮಾ 1.5 m ವ್ಯಾಸವುಳ್ಳ ವೃತ್ತಾಕಾರದ ಮೇಜಿನ ಹೊದಿಕೆಯ ಅಂಚಿಗೆ ಪಟ್ಟಿ ಹಾಕಲು ಇಚ್ಛಿಸುತ್ತಾಳೆ. ಅಗತ್ಯವಿರುವ ಪಟ್ಟಿಯ ಉದ್ದವನ್ನು ಕಂಡುಹಿಡಿಯಿರಿ. ಒಂದು ಮೀಟರ್ ಪಟ್ಟಿಯ ಬೆಲೆ ರೂ. 15 ಆದರೆ ಒಟ್ಟು ಪಟ್ಟಿಯ ಬೆಲೆ ಕಂಡುಹಿಡಿಯಿರಿ. ($\pi = 3.14$ ಎಂದು ತೆಗೆದುಕೊಳ್ಳಿ)**

- ವೃತ್ತಾಕಾರದ ಮೇಜಿನ ಹೊದಿಕೆಯ ವ್ಯಾಸ = 1.5 m

  ವೃತ್ತಾಕಾರದ ಮೇಜಿನ ಪರಿಧಿ = $\pi d$

  $= 3.14 \times 1.5$

  $= 4.710\ m$

  ಒಂದು ಮೀಟರ್ ಪಟ್ಟಿಯ ಬೆಲೆ ರೂ. 15

  4.170 m ಪಟ್ಟಿಯ ಬೆಲೆ = $4.170 \times 15$

  = ರೂ. 70.65

**7. ಪಕ್ಕದ ಚಿತ್ರದಲ್ಲಿ ವ್ಯಾಸವನ್ನು ಒಳಗೊಂಡಂತೆ ಅರ್ಧವೃತ್ತದ ಸುತ್ತಳತೆಯನ್ನು ಕಂಡುಹಿಡಿಯಿರಿ.**




- ಅರ್ಧ ವೃತ್ತದ ವ್ಯಾಸ = 10 cm

  ಅರ್ಧ ವೃತ್ತದ ಪರಿಧಿ = $\frac{1}{2}\pi d$

  $= \frac{1}{2} \times 3.14 \times 10$

  $= 15.7$ cm

  ವ್ಯಾಸವನ್ನು ಒಳಗೊಂಡಂತೆ ಅರ್ಧ ವೃತ್ತದ ಸುತ್ತಳತೆ = $10 + 15.7 = 25.7$ cm

**8. ಪ್ರತಿ ಚದರ ಮೀಟರ್ ಗೆ ರೂ. 15 ರಂತೆ 1.6 m ವ್ಯಾಸವುಳ್ಳ ವೃತ್ತಾಕಾರದ ಮೇಜಿನ**

ಶ್ರೀ. ಗಣಪತಿ ಕೋಲಾರ (ಜಿ.ಪಿ.ಟಿ)

ಮೇಲ್ಮೈಯನ್ನು ಹೊಳಪುಗೊಳಿಸಲು ತಗುಲುವ ವೆಚ್ಚ ಕಂಡುಹಿಡಿಯಿರಿ.

- ವೃತ್ತಕಾರದ ಮೇಜಿನ ವ್ಯಾಸ =1.6 m

  ತ್ರಿಜ್ಯ (r) = $\frac{d}{2} = \frac{1.6}{2}$ m=0.8 m

  ಮೇಜಿನ ವಿಸ್ತೀರ್ಣ (A) = $\pi r^2$

  $= 3.14 \times 0.8^2$

  $= 3.14 \times 0.8 \times 0.8$

  $= 2.0096\ m^2$

  ಹೊಳಪುಗೊಳಿಸಲು ಪ್ರತಿ ಚದರ ಮೀಟರ್‌ಗೆ ತಗುಲುವ ವೆಚ್ಚ = ರೂ. 15

  2.0096 ಚದರ ಮೀಟರ್ ಮೇಲ್ಮೈ ಹೊಳಪುಗೊಳಿಸಲು ತಗುಲುವ ವೆಚ್ಚ

  = 15 × 2.0096 = ರೂ. 30.14

9. ಶಾಜ್ಲ 44 cm ಉದ್ದದ ತಂತಿಯನ್ನು ತೆಗೆದುಕೊಂಡು ಅದನ್ನು ವೃತ್ತಾಕಾರಕ್ಕೆ ಬಾಗಿಸಿದ್ದಾಳೆ. ವೃತ್ತದ ತ್ರಿಜ್ಯ ಮತ್ತು ವಿಸ್ತೀರ್ಣ ಕಂಡುಹಿಡಿಯಿರಿ. ಇದೇ ತಂತಿಯನ್ನು ಚೌಕದ ಆಕಾರಕ್ಕೆ ಬಾಗಿಸಿದರೆ, ಪ್ರತಿ ಬಾಹುವಿನ ಉದ್ದ ಎಷ್ಟು ಇರುತ್ತದೆ? ಯಾವ ಆಕೃತಿಯು ಹೆಚ್ಚು ವಿಸ್ತೀರ್ಣವನ್ನು ಆವೃತಗೊಳಿಸುತ್ತದೆ ವೃತ್ತವೇ ಅಥವಾ ಚೌಕವೇ? ($\pi = \frac{22}{7}$ ಎಂದು ತೆಗೆದುಕೊಳ್ಳಿ)

- ತಂತಿಯ ಉದ್ದ = 44 cm

  ವೃತ್ತಾಕಾರದ ತಂತಿಯ ಪರಿಧಿ =$2\pi r$

  $44 = 2 \times \frac{22}{7} \times r$

  $r = \frac{44 \times 7}{22 \times 2}$

  $r = 7$ cm

  ವೃತ್ತದ ವಿಸ್ತೀರ್ಣ (A) = $\pi r^2$

  $= \frac{22}{7} \times 7^2$

  $= \frac{22}{7} \times 7 \times 7$

  $= 154\ cm^2$

  ಚೌಕಾಕಾರದ ತಂತಿಯ ಸುತ್ತಳತೆ = 44 cm

  ಚೌಕದ ಸುತ್ತಳತೆ = 4 × ಬಾಹು

  44 = 4 × ಬಾಹು

  ಬಾಹು = $\frac{44}{4}$ = 11 cm

  ಚೌಕದ ವಿಸ್ತೀರ್ಣ = ಬಾಹು$^2$

  $= 11^2$

  $= 11 \times 11$

  $= 121\ cm^2$

ವೃತ್ತದ ವಿಸ್ತೀರ್ಣವು ಹೆಚ್ಚಾಗಿದೆ. ಆದ್ದರಿಂದ ವೃತ್ತವು ಹೆಚ್ಚು ವಿಸ್ತೀರ್ಣವನ್ನು ಆವೃತಗೊಳಿಸುತ್ತದೆ.

10. ತ್ರಿಜ್ಯ 14 cm ಇರುವ ವೃತ್ತಾಕಾರದ ಕಾರ್ಡ್‌ಬೋರ್ಡ್ ಶೀಟ್‌ನಿಂದ 3.5 cm ತ್ರಿಜ್ಯವುಳ್ಳ ಎರಡು ವೃತ್ತಗಳು ಮತ್ತು 3 cm ಉದ್ದ ಮತ್ತು 1 cm ಅಗಲವಿರುವ ಆಯತವನ್ನು ಹೊರತೆಗೆಯಲಾಗಿದೆ. ಶೀಟ್‌ನ ಉಳಿದ ಭಾಗದ ವಿಸ್ತೀರ್ಣವನ್ನು ಕಂಡುಹಿಡಿಯಿರಿ. ($\pi = \frac{22}{7}$ ಎಂದು ತೆಗೆದುಕೊಳ್ಳಿ)



- ವೃತ್ತಾಕಾರದ ಕಾರ್ಡ್‌ಬೋರ್ಡ್‌ನ ತ್ರಿಜ್ಯ =14 cm

  ವೃತ್ತಾಕಾರದ ಕಾರ್ಡ್‌ಬೋರ್ಡ್‌ನ ವಿಸ್ತೀರ್ಣ = (A) = $\pi r^2$

  $= \frac{22}{7} \times 14^2$

  $= \frac{22}{7} \times 14 \times 14$

  $= 616\ cm^2$

  3.5 cm ತ್ರಿಜ್ಯವುಳ್ಳ 2 ವೃತ್ತಗಳ ವಿಸ್ತೀರ್ಣ =(A) = $2\pi r^2$

  $= 2 \times \frac{22}{7} \times 3.5^2$

  $= 2 \times \frac{22}{7} \times 3.5 \times 3.5$

  $= 77\ cm^2$

  3 cm ಉದ್ದ ಮತ್ತು 1 cm ಅಗಲವಿರುವ ಆಯತದ ವಿಸ್ತೀರ್ಣ = ಉದ್ದ × ಅಗಲ

  = 3 × 1

  =3 $cm^2$

  ಶೀಟ್‌ನ ಉಳಿದ ಭಾಗದ ವಿಸ್ತೀರ್ಣ = (ಒಟ್ಟು ವೃತ್ತದ ವಿಸ್ತೀರ್ಣ )- [(3.5 cm ತ್ರಿಜ್ಯವುಳ್ಳ 2 ವೃತ್ತಗಳ ವಿಸ್ತೀರ್ಣ) + ( ಆಯತದ ವಿಸ್ತೀರ್ಣ )]

  ಶೀಟ್‌ನ ಉಳಿದ ಭಾಗದ ವಿಸ್ತೀರ್ಣ

  = 616 – (77+3)

  = 616 – 80

  = 536 $cm^2$

11. 6 cm ಬಾಹುವಿರುವ ಚೌಕಾಕಾರದ ಅಲ್ಯುಮಿನಿಯಂ ಹಾಳೆಯಿಂದ 2 cm ತ್ರಿಜ್ಯವುಳ್ಳ ವೃತ್ತವನ್ನು ಕತ್ತರಿಸಿ ತೆಗೆಯಲಾಗಿದೆ. ಉಳಿದ ಅಲ್ಯುಮಿನಿಯಂ ಹಾಳೆಯ ವಿಸ್ತೀರ್ಣ ಎಷ್ಟು? ($\pi$ = 3.14 ಎಂದು ತೆಗೆದುಕೊಳ್ಳಿ)

- ಚೌಕಾಕಾರದ ಅಲ್ಯುಮಿನಿಯಂ ಹಾಳೆಯ ವಿಸ್ತೀರ್ಣ = ಬಾಹು$^2$

  $= 6^2$

  $= 6 \times 6$

  $= 36\ cm^2$

  2 cm ತ್ರಿಜ್ಯವುಳ್ಳ ವೃತ್ತದ ವಿಸ್ತೀರ್ಣ =(A) = $\pi r^2$

ಶ್ರೀ. ಗಣಪತಿ ಕೋಲಾರ (ಜಿ.ಪಿ.ಟಿ)

$= 3.14 \times 2^2$
$= 3.14 \times 2 \times 2$
$= 12.56\ cm^2$

ಉಳಿದ ಅಲ್ಯುಮಿನಿಯಂ ಹಾಳೆಯ ವಿಸ್ತೀರ್ಣ
=36 – 12.56
$=23.44\ cm^2$

12. ಒಂದು ವೃತ್ತದ ಸುತ್ತಳತೆಯು 31.4 cm ಇದೆ. ವೃತ್ತದ ತ್ರಿಜ್ಯ ಮತ್ತು ವಿಸ್ತೀರ್ಣವನ್ನು ಕಂಡುಹಿಡಿಯಿರಿ. ($\pi = 3.14$ ಎಂದು ತೆಗೆದುಕೊಳ್ಳಿ)

- ಒಂದು ವೃತ್ತದ ಸುತ್ತಳತೆಯು 31.4 cm

ವೃತ್ತದ ಪರಿಧಿ $=2\pi r$
$31.4 = 2 \times 3.14 \times r$
$r = \frac{31.4}{2\times3.14}$
$r = 5$ cm

ವೃತ್ತದ ವಿಸ್ತೀರ್ಣ (A) $= \pi r^2$
$= 3.14 \times 5^2$
$= 3.14 \times 5 \times 5$
$= 78.5\ cm^2$

13. ಒಂದು ವೃತ್ತಾಕಾರದ ಹೂವಿನ ತೋಟವು 4m ಅಗಲದ ಪಥದಿಂದ ಸುತ್ತುವರೆಯಲ್ಪಟ್ಟಿದೆ. ಹೂವಿನ ತೋಟದ ವ್ಯಾಸ 66 m ಆದರೆ, ಈ ಪಥದ ವಿಸ್ತೀರ್ಣ ಎಷ್ಟು? ($\pi = 3.14$ ಎಂದು ತೆಗೆದುಕೊಳ್ಳಿ)




- ಹೂವಿನ ತೋಟದ ವ್ಯಾಸ = 66 m

ತ್ರಿಜ್ಯ (r) $= \frac{d}{2} = \frac{66}{2}$ m=33 m

ವೃತ್ತಾಕಾರದ ಹೂವಿನ ತೋಟದ ವಿಸ್ತೀರ್ಣ (A) $= \pi r^2$
$= 3.14 \times 33^2$
$= 3.14 \times 33 \times 33$
$= 3419.46\ m^2$

ಹೂವಿನ ತೋಟ ಮತ್ತು ಪಥದ ತ್ರಿಜ್ಯ =37 m

ಹೂವಿನ ತೋಟ ಮತ್ತು ಪಥದ ವಿಸ್ತೀರ್ಣ (A) $= \pi r^2$
$= 3.14 \times 37^2$
$= 3.14 \times 37 \times 37$
$= 4298.66\ m^2$

